ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಅಕ್ಟೋಬರ್ 2015 ಮಾಸ ಪತ್ರಿಕೆ

ಸಂಪುಟ : 38
ಸಂಚಿಕೆ : 01
ಪುಟ : 12
ಬೆಲೆ : ₹ 5/-



ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ತ್ರೈವಾರ್ಷಿಕ 6ನೇ ಅಧಿವೇಶನದ ಉದ್ಘಾಟನಾ ಸಮಾರಂಭ



‘ಗುರು ಸಮ್ಮಾನ’ ಸಮಾರಂಭದಲ್ಲಿ ಕರ್ನಾಟಕದ ಖ್ಯಾತನಾಮ ಶಿಕ್ಷಕರಾದ ಪ್ರೊ|| ಜಿ.ಎಸ್. ಮುಡಂಬಡಿತ್ತಾಯ ಅವರಿಗೆ ‘ಶಿಕ್ಷಾಭೂಷಣ್’ ಪ್ರಶಸ್ತಿ

ಶಾಲೆಯಲ್ಲದ ಶಾಲೆ – ತೆರೆದ ಮೈದಾನ ಶಾಲೆ 4

ಕೇಂದ್ರದ 7ನೇ ವೇತನ ಆಯೋಗಕ್ಕೆ ಮನವಿ 6

A Journal of Karnataka State Secondary Teachers' Association

# ಸಂಪಾದಕೀಯ

ನಮ್ಮೆಲ್ಲಾ ಶಿಕ್ಷಕ ಮಿತ್ರರಿಗೂ, ವಿದ್ಯಾರ್ಥಿಗಳಿಗೂ ನಾಡಹಬ್ಬ ದಸರಾ, ದೀಪಾವಳಿ ಹಾಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.

ಈ ವರ್ಷ ದಸರಾ, ಕನ್ನಡ ರಾಜ್ಯೋತ್ಸವ ಎರಡು ನಾಡಹಬ್ಬಗಳೂ ಸಮೀಪದಲ್ಲಿಯೇ ಬಂದಿರುವುದು ಜನರ ಉತ್ಸಾಹವನ್ನು ಹೆಚ್ಚಿಸುತ್ತದೆಂದು ಭಾವಿಸೋಣ. ಮೈಸೂರಿನ ರಾಜ ಮನೆತನದಿಂದ ಪ್ರಾರಂಭವಾದ ದಸರಾ ಉತ್ಸವ ಕೇವಲ ರಾಜ ಮನೆತನದವರಿಗಷ್ಟೇ ಸೀಮಿತವಾಗದೆ ನಾಡ ಜನರೆಲ್ಲರ ಉತ್ಸವವಾಗಿ ಒಂಭತ್ತು ದಿನಗಳು ಆಚರಿಸಲಾಗುತ್ತದೆ. ಹತ್ತನೆಯ ದಿನ ವಿಜಯದಶಮಿಯನ್ನು ವಿಜೃಂಭಣೆಯಿಂದ ಅಂದೂ, ಇಂದೂ ಆಚರಿಸಲಾಗುತ್ತಿದೆ. ನವರಾತ್ರಿ ಉತ್ಸವವನ್ನು ಮನೆಮನೆಗಳಲ್ಲೂ ಆಚರಿಸುವುದರೊಂದಿಗೆ ಪ್ರಧಾನವಾಗಿ ಮೈಸೂರಿನಲ್ಲಿ ನಡೆಯುವ ವೈಭವದ ಜಂಬೂಸವಾರಿಯಲ್ಲಿ ನಾಡಿನ ಎಲ್ಲೆಡೆಯಿಂದ ಬರುವ ಜನತೆ ಸಾಂಸ್ಕೃತಿಕವಾಗಿ, ಭಾವನಾತ್ಮಕವಾಗಿ ಒಂದಾಗಿ ಸಂಭ್ರಮಿಸುವುದು ಸಂತೋಷದಾಯಕ. ರಾಜರ ಕಾಲದಲ್ಲಿದ್ದ ವೈಭವ, ಮೆರುಗು, ಸೊಗಸು ಈಗ ಕಡಮೆ ಎನಿಸಿದರೂ ಜನರ ಉತ್ಸಾಹ, ಸಂತಸ ಶ್ಲಾಘನೀಯ. ದಸರಾಚರಣೆಯು ಎಂದಿನಂತೆ ಈ ಬಾರಿಯೂ ನಾಡಿನ ಜನರಲ್ಲಿ ಏಕತೆಯ ಭಾವನೆಯನ್ನು ಬೆಳೆಸುವಲ್ಲಿ ಯಶಸ್ವಿಯಾಗುವುದೆಂದು ಆಶಿಸೋಣ.

ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತ ರಚನೆಯ ಅಗತ್ಯತೆ ಕಂಡು ಬಂದಿತು. ಇದರ ಪರಿಣಾಮವಾಗಿ 1956ರ ನವೆಂಬರ್ 1 ರಂದು ಅಕ್ಕಪಕ್ಕದ ಪ್ರಾಂತಗಳ ಆಡಳಿತಕ್ಕೆ ಒಳಪಟ್ಟಿದ್ದ ಕನ್ನಡ ನಾಡಿನ ಬೇರೆಬೇರೆ ಭಾಗಗಳನ್ನು ಒಂದುಗೂಡಿಸಿ, ಕನ್ನಡಿಗರನ್ನು ಆಡಳಿತಾತ್ಮಕವಾಗಿ ಒಂದಾಗಿಸಿದ ದಿನ ನವೆಂಬರ್ 1. ಇದರ ಆಚರಣೆಯನ್ನು ಕರ್ನಾಟಕದಾದ್ಯಂತ ಪ್ರತಿವರ್ಷ 'ಕನ್ನಡ ರಾಜ್ಯೋತ್ಸವವಾಗಿ ಆಚರಿಸುತ್ತೇವೆ. ಈ ಸಂದರ್ಭದಲ್ಲಿ ರಾಜ್ಯದ ಎಲ್ಲೆಡೆ ಕಾರ್ಯಕ್ರಮಗಳನ್ನು ರೂಪಿಸಿ, ಗಣ್ಯರನ್ನು ಸನ್ಮಾನಿಸಿ ಖುಷಿ ಪಡುತ್ತೇವೆ. ನವೆಂಬರ್ ತಿಂಗಳ ಪೂರ್ತಿ ರಾಜ್ಯೋತ್ಸವ ಆಚರಣೆ ಇರುತ್ತದೆ. ಕನ್ನಡ ಭಾಷೆ ಮೊದಲಿನಿಂದಲೂ ಶ್ರೇಷ್ಠ ಕವಿಗಳ ಕಾವ್ಯಗಳಿಂದ ಶ್ರೀಮಂತವಾಗಿದೆ. ಈಗಲೂ ನಮ್ಮ ಸಾಹಿತಿಗಳು ಕನ್ನಡದ ಸ್ಥಾನವನ್ನು ಸಾಹಿತ್ಯ ಲೋಕದಲ್ಲಿ ಶ್ರೇಷ್ಠವನ್ನಾಗಿಸಿದ್ದಾರೆ. ಆದರೆ ಸಾಮಾನ್ಯ ಜನರ ಮಾತು, ಬರಹಗಳನ್ನು ಗಮನಿಸಿದರೆ ಜನತೆಯಿಂದ ಕನ್ನಡ ಮರೆಯಾಗುತ್ತಿದೆಯೇನೋ ಅನಿಸುತ್ತದೆ. ಮಾತನಾಡುವಾಗ ಉಚ್ಚಾರಣೆಯಲ್ಲಿ ಬಹಳಷ್ಟು ತಪ್ಪುಗಳು, ಬರವಣಿಗೆಯಲ್ಲಿ ತಪ್ಪುಗಳು ಎದ್ದು ಕಾಣುತ್ತಿದೆ. ಹೀಗೇಕೆ ಎಂಬ ಪ್ರಶ್ನೆಗೆ ಸಹಜವಾಗಿಯೇ ಎಲ್ಲರೂ ಶಿಕ್ಷಕರತ್ತ ಬೆರಳು ಮಾಡಿ ತೋರಿಸುತ್ತಾರೆ. ಶಾಲೆಗಳಲ್ಲಿ ಮಕ್ಕಳಿಗೆ ಕನ್ನಡ ಸರಿಯಾಗಿ ಕಲಿಸಿಲ್ಲ ಎಂಬ ದೂರು ಕೇಳಬರುತ್ತದೆ. ಕನ್ನಡ ರಾಜ್ಯೋತ್ಸವದ ಈ ತಿಂಗಳಿನಲ್ಲಿ ಶಾಲೆಗಳಲ್ಲಿ ಶಿಕ್ಷಕರು ಶುದ್ಧ ಕನ್ನಡವನ್ನು ಕಲಿಸುವ ಅಭಿಯಾನವನ್ನು ಸ್ವ ಇಚ್ಛೆಯಿಂದ ಕೈಗೊಂಡರೆ ಕನ್ನಡದ ಬಳಕೆ ಶುದ್ದವಾಗಲು ಸಾಧ್ಯವಾಗುವುದಲ್ಲವೇ? ಈ ಅಭಿಯಾನವನ್ನು ಕೈಗೊಳ್ಳುವ ಸಂಕಲ್ಪವು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸದಸ್ಯ ಶಿಕ್ಷಕರಿಂದ ಪ್ರಾರಂಭವಾದರೆ ಉಳಿದವರಿಗೆ ಸ್ಫೂರ್ತಿಯಾಗುತ್ತದೆ. ಬನ್ನಿ. ಶುದ್ಧ ಓದು, ಶುದ್ಧ ಬರಹ ಅಭಿಯಾನವನ್ನು ಕೈಗೊಳ್ಳೋಣ.

ನವೆಂಬರ್ 14 ದೇಶದಾದ್ಯಂತ 'ಮಕ್ಕಳ ದಿನಾಚರಣೆ'. 'ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು' ಎಂಬ ಭಾವದಿಂದ ಮಕ್ಕಳನ್ನು ಬಹಳ ಎಚ್ಚರಿಕೆಯಿಂದ ಪೋಷಿಸುತ್ತೇವೆ. ತಂದೆ, ತಾಯಿ, ಸಮಾಜ ಅವರಿಗೆ ಉತ್ತಮ ಶಿಕ್ಷಣವನ್ನು ನೀಡುತ್ತದೆ. ಇಲ್ಲಿನ ಶಿಕ್ಷಣವನ್ನು ಪಡೆದು ವಿದ್ಯಾವಂತರಾದ ನಮ್ಮ ಯುವಕರು ವಿದೇಶಗಳಿಗೆ ಹಾರಿ ನೆಲೆಯನ್ನು ಕಂಡುಕೊಳ್ಳುತ್ತಾರೆ. ತಮ್ಮ ಪ್ರತಿಭೆಯನ್ನೆಲ್ಲಾ ವಿದೇಶಗಳಿಗೆ ಧಾರೆ ಎರೆಯುತ್ತಿದ್ದಾರೆ. ಹಾಗಾಗದಂತೆ ಅವರಲ್ಲಿ ದೇಶಾಭಿಮಾನ ಮೂಡಿಸುವಂತೆಯೂ ಶಿಕ್ಷಣವನ್ನು ನೀಡಿ ಇಂದಿನ ಮಕ್ಕಳು ಮುಂದೆಯೂ ಇಲ್ಲಿಯೆ ನೆಲೆಸುವಂತೆ ಮಾಡುವ ಹೊಣೆ ಎಲ್ಲರ ಮೇಲಿದೆ. ಇದಕ್ಕಾಗಿ ಪಾಲಕರು, ಶಿಕ್ಷಕರು ವಿಶೇಷವಾಗಿ ಪ್ರಯತ್ನಿಸಬಹುದಲ್ಲವೇ?

ಸಂಪಾದಕರು

## ಸೂಕ್ತಿ



"ಯಾರೂ ಮತ್ತೊಬ್ಬರಿಗೆ ಕಲಿಸಲಾರರು. ಗುರು ತಾನು ಕಲಿಸುತ್ತಿರುವೆ ಎಂದು ಭಾವಿಸುವುದರಿಂದ ಎಲ್ಲವನ್ನೂ ಹಾಳು ಮಾಡುವನು. ಪ್ರತಿಯೊಬ್ಬನಲ್ಲಿಯೂ, ಒಂದು ಮಗುವಿನಲ್ಲೂ ಕೂಡ ಆಗಲೆ ಜ್ಞಾನವಿದೆ ಎನ್ನುವುದು ವೇದಾಂತ. ಅದು ಕೇವಲ ಜಾಗೃತವಾಗಬೇಕಾಗಿದೆ ಅಷ್ಟೆ. ಇಷ್ಟು ಮಾತ್ರ ಗುರುವಿನ ಕೆಲಸ. ಮಕ್ಕಳೇ ತಮ್ಮ ಬುದ್ಧಿಯನ್ನು ಉಪಯೋಗಿಸಿ ಅದನ್ನು ಕಾರ್ಯಗತ ಮಾಡುವುದನ್ನು ಕಲಿಯಲಿ".

- ಸ್ವಾಮಿ ವಿವೇಕಾನಂದ

## ಪರಿವಿಡಿ


- ಪ್ರೊ॥ ಜಿ.ಎಸ್. ಮುಡಂಬಡಿತ್ತಾಯರವರಿಗೆ ಶಿಕ್ಷಾ ಭೂಷಣ್ ಸನ್ಮಾನ 3
- ಶಾಲೆಯಲ್ಲದ ಶಾಲೆ – ತೆರೆದ ಮೈದಾನ ಶಾಲೆ 4
- ಕೇಂದ್ರದ 7ನೇ ವೇತನ ಆಯೋಗಕ್ಕೆ ಮನವಿ 6
- ಶಿಕ್ಷಕ ಮತದಾರ ಕ್ಷೇತ್ರಕ್ಕೆ ತಮ್ಮ ಮತ ನೊಂದಾಯಿಸಿಕೊಳ್ಳಿ 7
- ಸವೆದು ಹೋದ ಓಝೋನ ಪದರು ಮರಳಿ ಪಡೆಯಲು ಸಾಧ್ಯವಿಲ್ಲ ರಕ್ಷಣೆಗೆ ಜಾಗೃತಿ ಅವಶ್ಯ 8
- ವಿದ್ಯಾರ್ಥಿ ಮಿತ್ರ 10
- ಶಿಕ್ಷಣ ತಜ್ಞ ಪ್ರೊ॥ ಮುಡಂಬಡಿತ್ತಾಯ ಇನ್ನಿಲ್ಲ 10
- ಎಬಿಆರ್‌ಎಸ್‌ಎಂನ ತ್ರೈವಾರ್ಷಿಕದ ಚಿತ್ರಗಳು 11
- ವಿಜಯಪುರ ಜಿಲ್ಲಾ ಪಂಚಾಯತ್ ಸಭೆಯಲ್ಲಿ 12

# ಪ್ರೊ॥ ಜಿ.ಎಸ್. ಮುಡಂಬಡಿತ್ತಾಯರವರಿಗೆ ಶಿಕ್ಷಾ ಭೂಷಣ್ ಸನ್ಮಾನ

ನಾಗಪುರದ ರೇಶಮ್ ಭಾಗ್‌ನ ಸ್ಮೃತಿ ಮಂದಿರದ ಆವರಣದಲ್ಲಿ ನಡೆದ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ತ್ರೈವಾರ್ಷಿಕ 6ನೇ ಅಧಿವೇಶನದ ಎರಡನೆಯ ದಿನವಾದ 10.10.2015 ಶನಿವಾರ ಸಂಜೆ 5 ಗಂಟೆಗೆ ನಡೆದ 'ಗುರು ಸಮ್ಮಾನ' ಸಮಾರಂಭದಲ್ಲಿ ನಮ್ಮ ರಾಜ್ಯದ ಖ್ಯಾತನಾಮ ಶಿಕ್ಷಕರಾದ ಪ್ರೊ॥ ಜಿ.ಎಸ್ ಮುಡಂಬಡಿತ್ತಾಯರವರಿಗೆ 'ಶಿಕ್ಷಾಭೂಷಣ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿಯೊಂದಿಗೆ ಶ್ರೀಯುತರ ಶಿಕ್ಷಣ ಕ್ಷೇತ್ರದ ಸಾಧನೆಯ ಬಗ್ಗೆ ಪ್ರಸ್ತುತ ಪಡಿಸಿದ ಪ್ರಶಸ್ತಿ ಪತ್ರದೊಂದಿಗೆ ಬೆಳ್ಳಿಯ ಕರಂಡಕದೊಂದಿಗೆ ಒಂದು ಲಕ್ಷ ರೂ ಮೌಲ್ಯದ ಚೆಕ್‌ನ್ನು ಸಮರ್ಪಿಸಲಾಯಿತು.

ಈ ಸಮಯದಲ್ಲಿ ಶ್ರೀಯುತರನ್ನು ಸನ್ಮಾನಿಸಿದ ಕಲ್ಕತ್ತಾದ ರಾಮಕೃಷ್ಣ ಮಿಷನ್ ವಿವೇಕಾನಂದ ವಿದ್ಯಾಪೀಠದ ಕುಲಪತಿಗಳಾದ ಸ್ವಾಮಿ ಆತ್ಮಪ್ರಿಯಾನಂದ ಮಹಾರಾಜ್‌ರವರು ಶಿಕ್ಷಣ ಕ್ಷೇತ್ರದಲ್ಲಿ ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಪುನರ್ ಸ್ಥಾಪಿಸುವ ನಿಟ್ಟಿನಲ್ಲಿ ಶ್ರೀ ಮುಂಡಂಬಡಿತ್ತಾಯರವರ ಕೊಡುಗೆ ಅಪಾರವಾಗಿದೆ ಎಂದು ಶ್ಲಾಘಿಸಿದರು. ನಿಧಿಯನ್ನು ಸಮರ್ಪಿಸಿದ ಕೇಂದ್ರ ಮಂತ್ರಿಗಳಾದ ಶ್ರೀ ನಿತಿನ್ ಗಡಕರಿಯವರು ಇಂದಿನ ಶಿಕ್ಷಣಕ್ರಮವು ಕೇವಲ ಸ್ವಾರ್ಥಿಗಳನ್ನು ಸೃಷ್ಟಿಸುತ್ತಿದೆ. ನಮ್ಮ ದೇಶದಲ್ಲಿನ ಎಲ್ಲ ಸಮಸ್ಯೆಗಳ ಮೂಲ, ಅಧಿಕ ಶಿಕ್ಷಣ ಪಡೆದವರದ್ದೇ ಆಗಿದೆ. ಇಂತಹ ಸಮಯದಲ್ಲಿ ಶಿಕ್ಷಣದ ಮೂಲಕ ರಾಷ್ಟ್ರ ಪುನರ್ ನಿರ್ಮಾಣವಾಗಬೇಕಾದರೆ ಸ್ವಾಮಿ ವಿವೇಕಾನಂದ, ಮಹಾತ್ಮಾಗಾಂಧಿ, ರವೀಂದ್ರನಾಥ್ ಠಾಗೂರ್, ಸ್ವಾಮಿ ದಯಾನಂದ, ಮಹರ್ಷಿ ಅರವಿಂದ, ಪಂಡಿತ್‌ದೀನ್‌ದಯಾಳು ಉಪಾಧ್ಯಾಯ ಮುಂತಾದ ಭಾರತೀಯ ಚಿಂತಕರ ಶ್ರೇಷ್ಠ ವಿಚಾರಗಳನ್ನೊಳಗೊಂಡ ಶಿಕ್ಷಣ ಕ್ರಮವನ್ನು ಅನುಸರಿಸುವುದರಿಂದಲೇ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಶ್ರೀ ಜಿ.ಎಸ್. ಮುಡಂಬಡಿತ್ತಾಯರವರೊಂದಿಗೆ ಮಹಾರಾಷ್ಟ್ರದ 92 ವಯಸ್ಸಿನ ಶ್ರೇಷ್ಠ ಶಿಕ್ಷಣ ತಜ್ಞರಾದ ಡಾ॥ ಪ್ರಭಾಕರ್ ಲಕ್ಷ್ಮಣ ಬಾಬ್ಡೆ ಜೀ ಹಾಗೂ ಗುಜರಾತಿನ ಅಹಮದಾಬಾದಿನ ಪುನರುತ್ಥಾನ ವಿದ್ಯಾಪೀಠದ ಸಂಸ್ಥಾಪಕ ಕುಲಪತಿ ಶ್ರೀಮತಿ ಇಂದುಮತಿ ಕಾತದರೇ ಅವರನ್ನೂ ಸಹ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿದ ನಂತರ ಮಾತನಾಡಿದ ಮುಡಂಬಡಿತ್ತಾಯರವರು, 'ನನಗೆ ರಾಜ್ಯದ ಹಾಗೂ ರಾಷ್ಟ್ರದ ಶಿಕ್ಷಕ ಪ್ರಶಸ್ತಿಗಳು ಬಂದಿದೆ. ಆದರೆ ದೇಶದ ಬೃಹತ್ ಶಿಕ್ಷಕ ಸಂಘಟನೆಯಾದ ಶೈಕ್ಷಿಕ ಮಹಾಸಂಘದಿಂದ ಈ ಪ್ರಶಸ್ತಿ, ಹೆಚ್ಚು ಸಂತೋಷವನ್ನುಂಟುಮಾಡಿದೆ. ನನ್ನ ಆರೋಗ್ಯ ವಿಷಮಿಸಿದ್ದರೂ, ನಿಮ್ಮ ಪ್ರೀತಿಯ ಸೆಳೆತ ನನ್ನನ್ನು ನಾಗಪುರದವರೆಗೆ ಕರೆತಂದಿದೆ. ಓರ್ವ ಶಿಕ್ಷಕನಾಗಿ ನಾನು ಸಮಾಜಕ್ಕೆ ಏನನ್ನು ಕೊಡಬಹುದೋ ಅದಷ್ಟನ್ನೇ ಮಾಡಿರುವೆ ಈ ಪ್ರಶಸ್ತಿ ಕೇವಲ ನನ್ನೊಬ್ಬನಿಗಲ್ಲ ಎಲ್ಲ ಶಿಕ್ಷಕ ಸಮೂಹಕ್ಕೆ ಸಲ್ಲುವಂಥದ್ದು' ಎಂದು ನುಡಿದರು.

ಪ್ರಾರಂಭದಲ್ಲಿ ಡಾ॥ ಪ್ರಭಾಕರ್ ಬಾಬಡೆ ಹಾಗೂ ಇಂದುಮತಿಯವರು ಮಾತನಾಡುತ್ತಾ ಇದೇ ಬಗೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ದೌರ್ಭಾಗ್ಯದ ಸಂಗತಿಯೆಂದರೆ ನಮ್ಮ ದೇಶದಲ್ಲಿ ಶಿಕ್ಷಕ ಪ್ರಶಸ್ತಿಗಳನ್ನು ನೀಡುವಾಗ ಶಿಕ್ಷಕರಿಂದಲೇ ಅರ್ಜಿಯನ್ನು ಆಹ್ವಾನಿಸಲಾಗುತ್ತದೆ. ಈ ಅರ್ಜಿಗಳಲ್ಲಿ ಶಿಕ್ಷಕರ ಸಾಧನೆಗಳನ್ನು ಗುರುತಿಸದೇ ವಿವಿಧ ರೀತಿಯ ಪ್ರಭಾವಗಳನ್ನು ಗುರುತಿಸಿ ಶಿಕ್ಷಕರನ್ನು ಆಯ್ಕೆಮಾಡಲಾಗುತ್ತದೆ. ಹೀಗಾಗಿ ಸ್ವಾಭಿಮಾನವುಳ್ಳ ಬಹುತೇಕ ಶಿಕ್ಷಕರು ಅರ್ಜಿಹಾಕುವುದೇ ಇಲ್ಲ. ಈ ಬಗ್ಗೆ ದೀರ್ಘವಾಗಿ ಚಿಂತನೆ ನಡೆಸಿದ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಭಾರತೀಯ ಶಿಕ್ಷಣದ ಬಗ್ಗೆ ಮಹತ್ತರ ಸಾಧನೆ ಮಾಡಿರುವ ಶಿಕ್ಷಕರನ್ನು ಶಿಕ್ಷಕರೇ ಗುರುತಿಸಿ ಅಂಥವರನ್ನು ಸಮ್ಮಾನಿಸುವ 'ಶಿಕ್ಷಾಭೂಷಣ್' ಯೋಜನೆಯನ್ನು ರೂಪಿಸಿತು.

ಈ ಯೋಜನೆಯಂತೆ ನಮ್ಮ ದೇಶದ ಎಲ್ಲ ರಾಜ್ಯಗಳಲ್ಲಿ ಶೈಕ್ಷಿಕ ಮಹಾಸಂಘದೊಂದಿಗೆ ಸಂಗಲ್ನಗೊಂಡಿರುವ ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಉಚ್ಚ ಶಿಕ್ಷಣದವರೆಗಿನ ಎಲ್ಲ ಶಿಕ್ಷಕ ಸಂಘಗಳಿಗೆ ಪರಿಪತ್ರಕಗಳನ್ನು ಕಳಿಸಿ ಅವರಿಂದ ಪ್ರಾಯೋಜಿತರಾದ ಶಿಕ್ಷಕರನ್ನು ನಿವೃತ್ತ ನ್ಯಾಯಮೂರ್ತಿಗಳು, IAS ಅಧಿಕಾರಿಗಳು ಹಾಗೂ ಕುಲಪತಿಗಳನ್ನುಳ್ಳ 7 ಜನ ಸದಸ್ಯರನ್ನೊಳಗೊಂಡ ಆಯ್ಕೆ ಸಮಿತಿಗೆ ಕಳುಹಿಸಿದ್ದು ಆಯ್ಕೆ ಸಮಿತಿಯು ಆಯ್ದ ಮೂರು ಜನ ಶಿಕ್ಷಕರನ್ನು ಗೌರವಿಸುವ ಯೋಜನೆಯನ್ನು ಈ ವರ್ಷದಿಂದ ಪ್ರಾರಂಭಿಸಲಾಗಿದೆ. ಈ ವರ್ಷದ 'ಶಿಕ್ಷಾಭೂಷಣ್' ಶಿಕ್ಷಾಪ್ರಶಸ್ತಿ ಸಮಾರಂಭ ಮೊದಲನೆಯದಾಗಿದ್ದು ಇನ್ನು ಮುಂದೆ ಪ್ರತಿವರ್ಷ ಆಷಾಢ ಶುಕ್ಲದ 'ಗುರು ಪೂರ್ಣಿಮೆಯಂದು ಗುರುವಂದನಾ ಕಾರ್ಯಕ್ರಮ ಆಯೋಜಿಸಿ ಆ ಸಮಯದಲ್ಲಿ ಈ ಪ್ರಶಸ್ತಿಯನ್ನು ನೀಡಬೇಕೆಂದು ನಿರ್ಧರಿಸಲಾಗಿದೆ. •



# ಶಾಲೆಯಲ್ಲದ ಶಾಲೆ ತೆರೆದ ಮೈದಾನ ಶಾಲೆ

**ಇಲ್ಲೊಂದು ಶಾಲೆ ಇದೆ. ಇಲ್ಲಿ ಪ್ರವೇಶ ಪಡೆಯಲು ಕ್ಯೂ ಇಲ್ಲ. ಅಪ್ಲಿಕೇಷನ್ ಫಾರಂ ಬೇಡ. ಫೀಸಿಲ್ಲ, ಬೋರ್ಡ್ ಇಲ್ಲ, ಸೀಮೆಸುಣ್ಣ ಇಲ್ಲ, ತೆರೆದ ಮೈದಾನವೇ ಕ್ಲಾಸ್ ರೂಂ. ಇಲ್ಲಿ ಕಲಿತವರು ಅಪ್ರತಿಮ ದೇಶಭಕ್ತರಾದಾರು. ಸಾಮಾಜಿಕ ಕಳಕಳಿ ಉಳ್ಳವರಾದಾರು, ಇವರ ಬಗ್ಗೆ ಇಡೀ ಭಾರತೀಯ ಸಮಾಜ ಹೆಮ್ಮೆ ಪಡುತ್ತದೆ. ಇದಾರ ಶಾಲೆ? ಸ್ಥಾಪಕರಾರು ಎಂಬ ವಿವರ ಲೇಖನ ಓದಿ ತಿಳಿಯಿರಿ.**

**ಎಚ್. ನಾಗಭೂಷಣರಾವ್**
**ಪೋಷಕರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.)**



ಹೌದು. ಈ ಶಾಲೆಗೆ ನಾಲ್ಕು ಗೋಡೆಗಳಿಲ್ಲ. ಬೆಂಚುಗಳಿಲ್ಲ, ಕರೀಹಲಗೆ ಮೊದಲೇ ಇಲ್ಲ, ಮೇಲ್ಚಾವಣಿ ಎಂದರೆ ಆಕಾಶವೇ. ಶಿಕ್ಷಕರು ಸೀಮೆಸುಣ್ಣ, ಒರೆಸುವ ಬಟ್ಟೆ ಉಪಯೋಗಿಸುವುದಿಲ್ಲ ವಾದರೆ, ವಿದ್ಯಾರ್ಥಿಗಳು ಪೆನ್ನು, ಪೆನ್ಸಿಲ್, ನೋಟ್ ಬುಕ್ ತರುವುದಿಲ್ಲ. ಟೆಕ್ಸ್ಟ್ ಬುಕ್ ಇಲ್ಲ. ಹೋಂವರ್ಕ್ ಇಲ್ಲ. ಹಾಂ! ಇಲ್ಲಿ ಪಾಠ ಇಲ್ಲದಿದ್ದರೂ ಆಟವಂತೂ ಉಂಟು. ಕ್ರಿಕೆಟ್, ಟೆನ್ನಿಸ್, ಟೇಬಲ್ ಟೆನ್ನಿಸ್ ಮುಂತಾದ ಹಣ ಬೇಡುವ ಆಟಗಳಲ್ಲ. ಕಾಸು ಖರ್ಚಿಲ್ಲದ ಆಟಗಳಾದ ಕಬ್ಬಡ್ಡಿ, ಖೋ ಖೋ ಇನ್ನೂ ಕೆಲವು ಮೈಕೈ ಮಣ್ಣಾಗುವ ದೇಶೀಯ ಆಟಗಳು.

ಶಿಶುವಿಹಾರ, ಪ್ರೈಮರಿ, ಸೆಕೆಂಡರಿ, ಕಾಲೇಜುಗಳಲ್ಲಿ ಕಲಿಯುವಂತೆ ಇಲ್ಲೂ ಶಿಶುಗಳು ಬರುತ್ತಾರೆ. ಕಿಶೋರರಾಗಿ ಬೆಳೆದು ತರುಣರಾಗುತ್ತಾರೆ. ಬೆಳೆದಂತೆಲ್ಲಾ ಕಲಿಯುತ್ತಾ ಹೋಗುತ್ತಾರೆ. ಇಲ್ಲಿ ವಾದ-ವಿವಾದಗಳಾಗುತ್ತವೆ. ಚರ್ಚೆಗಳು ನಡೆಯುತ್ತಿವೆ. ಕಥೆ ಕೇಳುತ್ತಾರೆ. ಹಾಡುಗಳನ್ನು ಹಾಡುತ್ತಾರೆ. ಈ ಎಲ್ಲ ಪ್ರಕ್ರಿಯೆಗಳಿಂದ ಸಂಸ್ಕಾರವನ್ನು ಗಳಿಸುತ್ತಾರೆ. ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾರೆ.

ಇಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಸಾಮಾಜಿಕ ಕಳಕಳಿಯನ್ನು ಬೆಳೆಸಿಕೊಳ್ಳುತ್ತಾರೆ. ನಾಡಿಗಾಗಿ ದುಡಿಯುತ್ತಾರೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸಮಾಜ ಸೇವೆಗೆ ಮುಂದಾಗುತ್ತಾರೆ. ಒಂದೆರಡು ಉದಾಹರಣೆಗಳು ಇವರ ಸಾಮಾಜಿಕ ಬದ್ಧತೆಯನ್ನು ಸ್ಪಷ್ಟಗೊಳಿಸುತ್ತದೆ.

2004 ರಲ್ಲಿ ತಮಿಳುನಾಡಿನಲ್ಲಿ ಸುನಾಮಿಯಾದಾಗ ಈ ವಿದ್ಯಾರ್ಥಿಗಳು, ಬಾಲ-ತರುಣರೆನ್ನದೆ ಹಗಲು ರಾತ್ರಿ ಒಂದು ಮಾಡಿ ನೊಂದವರ ಸೇವೆಮಾಡಿದರು. ಸ್ವಲ್ಪವೂ ಅಸಹ್ಯಪಡದೆ ಕೊಳೆತ ಶವಗಳ ಸಂಸ್ಕಾರ ಮಾಡಿದರು. ಗುಜರಾತ್‌ನಲ್ಲಿ ಭೂಕಂಪವಾಯ್ತು ಅಲ್ಲಿ ಇವರು ಹಾಜರ್ . ಇತ್ತೀಚಿನ ನೇಪಾಳದ ಭೂಕಂಪದಲ್ಲೂ ಇವರ ಸೇವೆ ಅಪ್ರತಿಮ. ಸೇವೆ ಸಲ್ಲಿಸುವಾಗ ಜಾತಿ, ಮತ ಅಂತಸ್ತುಗಳ ಭೇದವಿಲ್ಲ.

ಎಲ್ಲೋ ರೈಲಿನ ಅಪಘಾತವಾಯ್ತು, ವಿಮಾನದ ಪತನವಾಯ್ತು. ಸುದ್ದಿ ತಿಳಿದ ಮರುಕ್ಷಣವೇ ಈ ಶಾಲೆಯಲ್ಲಿ ಕಲಿತವರು ಗಾಯಾಳುಗಳ ಸೇವೆಗೆ ವೈದ್ಯರಿಗಿಂತ ಮೊದಲು ತಲುಪುತ್ತಾರೆ. ಎಲ್ಲಕ್ಕಿಂತ ಮಿಗಿಲಾಗಿ ದೇಶಕ್ಕೆ ಗಂಡಾಂತರ ಬಂದಾಗಲೆಲ್ಲ, ನಮ್ಮ ಸೈನಿಕರು ಬಯಸುವುದು ಇವರ ಸಹಕಾರವನ್ನು. 1947ರಲ್ಲಿ ದೇಶ ವಿಭಜನೆಯಾದ ಹೊಸತು. ಪಾಕಿಸ್ಥಾನದ ಸೈನಿಕರು ವೇಷ ಮರೆಸಿಕೊಂಡು ಕಾಶ್ಮೀರಕ್ಕೆ ನುಗ್ಗಿದರು. ಅರ್ಧ ಕಾಶ್ಮೀರವನ್ನು ವಶಪಡಿಸಿಕೊಂಡು (ಈಗ ಆ ಭಾಗವನ್ನು ಆಜಾದ್ ಕಾಶ್ಮೀರವೆನ್ನುವರು) ಶ್ರೀನಗರದ ಕಡೆ ಮುನ್ನುಗ್ಗುತ್ತಿದ್ದರು. ಚಳಿಗಾಲ, ಶ್ರೀನಗರದ ವಿಮಾನ ನಿಲ್ದಾಣದಲ್ಲಿ ಹಿಮಹಾಸು, ವಾಯುಪಡೆಯ ವಿಮಾನಗಳು ಇಳಿಯಲಾಗುತ್ತಿಲ್ಲ. ಅಂಥ ಮೈಮರಗಟ್ಟುವ ಚಳಿಯಲ್ಲಿ ಈ ಶಾಲೆಯ ಹಿರಿಯ ವಿದ್ಯಾರ್ಥಿಗಳು, ಬಾಲಕ ಕಿಶೋರರನ್ನೂ ಕೂಡಿಸಿಕೊಂಡು ಯುದ್ಧವಿಮಾನಗಳು ಇಳಿಯಲು ಅನುಕೂಲವಾಗುವಂತೆ ಇಡೀ ನಿಲ್ದಾಣವನ್ನು ಸ್ವಚ್ಛಗೊಳಿಸಿದರು. ಸೇನಾ ಅಧಿಕಾರಿಗಳು ದಿಗ್ಭ್ರಮೆಗೊಂಡರು. ಸಂಸ್ಥೆಯ ಅಂದಿನ ಮುಖ್ಯಸ್ಥರನ್ನು 'ಈ ಬಾಲಕ ತರುಣರಿಗೆ ನೀವು ಯಾವ ವಿಶೇಷ ಶಿಕ್ಷಣ ನೀಡುತ್ತೀರಿ?

ಪುಟ 9 ಕ್ಕೆ ➤

➢ ಪುಟ 4 ರಿಂದ..... ಶಾಲೆಯಲ್ಲದ ಶಾಲೆ...

ಇವರ ಸಾಹಸ, ಶೌರ್ಯ, ದೇಶಪ್ರೇಮ ಅತುಲನೀಯ' ಎಂದು ಕೇಳಿದರು. ಈ ಪ್ರಶ್ನೆಗೆ ಅವರು "ನಮ್ಮಲ್ಲಿ ಆ ಬಗೆಯ ವಿಶೇಷ ತರಬೇತಿಯನ್ನೇನೂ ಕೊಡುವುದಿಲ್ಲ, ಆದರೆ ಮೈದಾನದಲ್ಲಿ ನಮ್ಮ ವಿದ್ಯಾರ್ಥಿಗಳು ಕಬ್ಬಡ್ಡಿ ಆಟ ಆಡಿದ ನಂತರ, ತಾಯಿಭಾರತಿಯನ್ನು ಪ್ರಾರ್ಥಿಸುತ್ತಾ ಅಮ್ಮಾ ನಿನಗಾಗಿ ನನ್ನದೆಲ್ಲವೂ ಮುಡಿಪು ಎಂಬುದಾಗಿ ಸಂಕಲ್ಪ ಮಾಡುತ್ತಾರೆ. ಆ ಸಂಕಲ್ಪವೇ ಇವರಿಗೆ ಎಲ್ಲ ಬಗೆಯ ಶಕ್ತಿಯನ್ನು ನೀಡುತ್ತದೆ" ಎಂದು ಉತ್ತರಿಸಿದರು.

ಇಂಥ ದೇಶಪ್ರೇಮೀ, ಸಾಮಾಜಿಕ ಕಳಕಳಿಯುಳ್ಳ ಉತ್ತಮ ನಾಗರೀಕರನ್ನು ತಯಾರು ಮಾಡುವ ಆ ಶಾಲೆ ಯಾವುದು? ಯಾರಿದನ್ನು ಪ್ರಾರಂಭಿಸಿದ್ದು? ಏನದರ ಹೆಸರು? ಯಾವ ಸಿಲೆಬಸ್ ಅನುಸರಿಸುತ್ತಾರೆ? ಸ್ಟೇಟ್ ಸಿಲೆಬಸ್ಸಾ? ಸೆಂಟ್ರಲ್ ಸಿಲೆಬಸ್ಸಾ? ಆ ಶಾಲೆಯ ಹೆಸರೇನು? ತುಂಬಾ ದುಬಾರಿ ಶಾಲೆನಾ? ಎಂಬ ಅನೇಕ ಕುತೂಹಲಕರ ಪ್ರಶ್ನೆಗಳು ನಮ್ಮನ್ನು ಕಾಡುವುದು ಸಹಜ.

ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಹುಡುಕುವ ಮೊದಲು ನಾವು ಭಾರತೀಯ ಶಿಕ್ಷಣದ ಮೂಲ ಸ್ವರೂಪವನ್ನು ಅರ್ಥ ಮಾಡಿಕೊಳ್ಳಬೇಕು. ಶಿಕ್ಷಣದ ಮೂಲ ಸ್ವರೂಪವನ್ನು ಆಧುನಿಕ ಶಿಕ್ಷಣದ ಮೂಸೆಯಲ್ಲೇ ರೂಪುಗೊಂಡ ಸ್ವಾಮಿ ವಿವೇಕಾನಂದರಿಗಿಂತ ಸ್ಪಷ್ಟವಾಗಿ ಹೇಳಿದವರು ವಿರಳ. ವಿವೇಕಾನಂದರು "ವ್ಯಕ್ತಿಯಲ್ಲಿರುವ ಪರಿಪೂರ್ಣತೆಯನ್ನು ಹೊರಹೊಮ್ಮಿಸುವ ಮನುಷ್ಯ ನಿರ್ಮಾಣವೇ ಶಿಕ್ಷಣ. ಕಬ್ಬಿಣದ ಮಾಂಸಖಂಡಗಳು, ಉಕ್ಕಿನ ನರಗಳುಳ್ಳ, ಸಿಡಿಲು ಸದೃಶ ಶಕ್ತಿವಂತ, ಹೃದಯವುಳ್ಳವರ ನಿರ್ಮಿತ, ಬ್ರಹ್ಮಚರ್ಯ, ಗುರುವಿನ ಮೇಲ್ಪಂಕ್ತಿ, ಇವೇ ಶಿಕ್ಷಣದ ಜೀವದುಸಿರು" 'ರಾಷ್ಟ್ರೀಯ ಗೊತ್ತುಗುರಿಗಳಿಗೆ ಅನುಸಾರವಾಗಿ ನಮ್ಮ ಶಿಕ್ಷಣ ಕ್ರಮವನ್ನು ರೂಪಿಸಬೇಕು' ಎಂದು ಆಗ್ರಹ ಪೂರ್ವಕ ಕರೆನೀಡಿದ್ದರು.

ಆದರೆ ಇಂದು ನಾವು ಕಾಣುತ್ತಿರುವುದು ಇದಕ್ಕೆ ವ್ಯತಿರಿಕ್ತವಾದ ಶಿಕ್ಷಣ ಕ್ರಮ. ವಿದ್ಯಾರ್ಥಿಗಳ ತಲೆಯಲ್ಲಿ ಕೇವಲ ಮಾಹಿತಿಯನ್ನು ತುರುಕುವುದು. ಯಾವುದೇ ಮೌಲ್ಯಗಳನ್ನು ಕಲಿಸದೆ ಅವರನ್ನು ನೌಕರಿಗೆ ಸಿದ್ಧಪಡಿಸುವುದು. ಅವರು ಭೋಗ ಲೋಲುಪರಾಗಿ, ಸ್ವಾರ್ಥಸಾಧಕರಾಗಿ ಹೃದಯ ಹೀನರಾಗಿ, ಭ್ರಷ್ಟಾಚಾರದಲ್ಲಿ ತೊಡಗಿಕೊಂಡು ಸಮಾಜ ಕಂಟಕರಾಗಿ ಜೀವನವನ್ನು ನಡೆಸುವುದನ್ನು ಕಾಣುತ್ತೇವೆ. ಈ ಕನಸನ್ನೇ ಮೆಕಾಲೆ– ಮಾರ್ಕ್ಸ್ ವಾದಿಗಳು ಕಂಡಿದ್ದು ಮತ್ತು ಬಯಸಿದ್ದು.

ಭಾರತೀಯ ಬೇರುಗಳಿಂದ ದೂರ ಉಳಿದ ಶಿಕ್ಷಣದ ಪರಿಣಾಮ ಏನಾದೀತೆಂಬ ಇಂದಿನ ದೃಶ್ಯವನ್ನು 1919–20ರ ದಶಕದಲ್ಲೇ ಕಂಡುಕೊಂಡ ಮಹನೀಯರೊಬ್ಬರು 1925ರಲ್ಲಿ ನಾನು ಉಲ್ಲೇಖಿಸಿದ 'ತೆರೆದ ಮೈದಾನ' (Open field school system) ಯನ್ನು ಪ್ರಾರಂಭ ಮಾಡಿದರು. ಅವರು ಆಧುನಿಕ ಪರಿಭಾಷೆಯಲ್ಲಿ ದೊಡ್ಡ ಶಿಕ್ಷಣವೇತ್ತರಾಗಿರಲಿಲ್ಲ. ಆದರೆ ಭಾರತದ ಭೂತಕಾಲದ ವೈಭವವನ್ನು ಭವಿಷ್ಯದಲ್ಲಿ ಕಾಣಬೇಕೆಂಬ ಕನಸು ಹೊತ್ತವರು. ವೈದ್ಯಕೀಯ ಶಿಕ್ಷಣದ ನಿಮಿತ್ತ ಮಾಡಿಕೊಂಡು ಅಂದಿನ ಕ್ರಾಂತಿಕಾರಿಗಳ ತವರು, ಕಲ್ಕತ್ತೆಗೆ ತೆರಳಿ ನಾಡಮುಕ್ತಿಗಾಗಿ ಕ್ರಾಂತಿಕಾರೀ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಪದವಿಯನ್ನು ಪಡೆದ ನಂತರವೂ ವೈದ್ಯ ವೃತ್ತಿಯನ್ನು ನಡೆಸದೆ ಕಾಂಗ್ರೆಸ್ ಸೇರಿ ವಿವಿಧ ಚಳುವಳಿಗಳಲ್ಲಿ ಭಾಗವಹಿಸಿ ಜೈಲು ಸೇರಿದರು. ಜೈಲಿನ ಏಕಾಂತದಲ್ಲಿ 'ಎಲ್ಲ ಸಾಧನ ಸಂಪತ್ತಿದ್ದರೂ ನಾವು ಪರಕೀಯರ ಆಕ್ರಮಣಕ್ಕೆ ತುತ್ತಾದುದಾದರೂ ಏಕೆ? ಇದೇ ಮನಃಸ್ಥಿತಿಯ ಜನ ಸಂಪತ್ತಿದ್ದರೆ, ಸ್ವಾತಂತ್ರ ಬಂದ ನಂತರವೂ ನಾವು ಮತ್ತೆ ದಾಸ್ಯಕ್ಕೆ ಒಳಗಾಗುವುದಿಲ್ಲ ವೆಂಬುದಕ್ಕೆ ಖಾತರಿ ಏನು? ಈ ಸಮಸ್ಯೆಗೆ ಪರಿಹಾರವೇನು? ಎಂದು ದೀರ್ಘವಾಗಿ ಚಿಂತಿಸಿದರು.

ಈ ಆಳವಾದ ಚಿಂತನೆ ಅವರಿಗೆ ಹೊಸತೊಂದು ಮಾರ್ಗವನ್ನು ತೋರಿಸಿತು. ಭಾರತೀಯರನ್ನು ಏಕಸೂತ್ರದಲ್ಲಿ ಹೆಣೆಯುವ ಹೊಸ ಬಗೆಯ ಶಿಕ್ಷಣವನ್ನು ನೀಡಬೇಕು. ಈ ಶಿಕ್ಷಣದ ಮೂಲಕ, ಸ್ವಾಮಿ ವಿವೇಕಾನಂದರ 'Men with capital 'M' ಎಂಬ ಹೊಸ ಪೀಳಿಗೆಯನ್ನು ನಿರ್ಮಿಸಬೇಕು. ಇವರು ತಮ್ಮ ಬದುಕನ್ನು ಸಮಾಜ ಕೇಂದ್ರವಾಗಿಸಿ, ರಾಷ್ಟ್ರಕೇಂದ್ರವಾಗಿಸಿಕೊಂಡು ನಡೆಸಬೇಕು. ಅವರಲ್ಲಿ ಭಾರತೀಯರೆಲ್ಲ ಒಂದು –ಬಂಧು ಎಂಬ ಭಾವ ಬಲಿಯಬೇಕು. ಹಾಗಾದಾಗ ಮಾತ್ರ ಮತ್ತೊಮ್ಮೆ ತಾಯಿ ಭಾರತಿ ಜಗದ್ವಂದ್ಯಳಾದಾಳು ಎಂಬ ಸತ್ಯ ಗೋಚರಿಸಿತು. ಅವರ ಸತ್ಯದರ್ಶನ ಕೇವಲ ವಿಚಾರವಾಗಿ ಉಳಿಯಲಿಲ್ಲ. ಅದನ್ನು ಪ್ರತ್ಯಕ್ಷ ಆಚರಣೆಯಲ್ಲಿ ತರುವ ಮಾರ್ಗವನ್ನು ಕಂಡುಕೊಂಡರು.

ಔಪಚಾರಿಕ ಶಿಕ್ಷಣವನ್ನು ಯಾವ ಸಂಸ್ಥೆಯಲ್ಲಾದರೂ ಕಲಿಯಲಿ, ಯಾವ ವೃತ್ತಿಯನ್ನಾದರೂ ಹಿಡಿಯಲಿ, ಆದರೆ ಕೇವಲ ಒಂದು ಗಂಟೆ ಈ ತೆರೆದ ಮೈದಾನ ಶಾಲೆಗೆ ಬರಲಿ. ಇಲ್ಲಿ ಕೊಡುವ ವಿಶೇಷ ಸಂಸ್ಕಾರದಿಂದ ಅವರು ಸಮಾಜ ಮುಖಿ ಚಿಂತಿಸುವ ನಾಗರೀಕರಾಗುತ್ತಾರೆ ಎಂದು ತಮ್ಮ ಮೊದಲ ಪ್ರಯೋಗ ಶಾಲೆಯನ್ನು 1925 ರ ವಿಜಯದಶಮಿ ಶುಭ ಪರ್ವದಿನದಂದು ನಾಗಪುರದ ಒಂದು ಪಾಳು ಬಿದ್ದ ಕೋಟೆಯ ಎದುರಿನ ಚಿಕ್ಕ ಮೈದಾನದಲ್ಲಿ ಪ್ರಾರಂಭಿಸಿದರು. ಈ ಶಾಲೆಗೆ ಜಾತಿಮತ ಬೇಧವಿಲ್ಲದೆ ಎಲ್ಲರಿಗೂ ಪ್ರವೇಶವಿತ್ತು. ಜತೆಗೆ ಫೀಸಿಲ್ಲದೆ ಪ್ರವೇಶ. ಇಂಥ ವಿಶೇಷ ಶಾಲೆಯನ್ನು ಪ್ರಾರಂಭಿಸಿದ ಮಹಾನ್ ದ್ರಷ್ಟಾರನ ಹೆಸರು ಡಾ॥ ಕೇಶವ ಬಲಿರಾಂ ಹಡಗೇವಾರ್. ಶಾಲೆಯಲ್ಲಿ ಬಾಲಕ, ಶಿಶುಗಳೊಂದಿಗೆ ಕುಣಿದಾಡುತ್ತಾ ಅವರಿಗೆ ಜೀವನ ಸಂಸ್ಕಾರ ನೀಡುತ್ತ ಅವರ ವಯಸ್ಸು ಅಂದಿಗೆ 35 ವರ್ಷ.

1889 ರ ಯುಗಾದಿಯ ಶುಭ ದಿನದಂದು ಹುಟ್ಟಿದ ಕೇಶವ, ಬಾಲ್ಯದಲ್ಲೇ ತಾಯ್ತಂದೆಯರನ್ನು ಕಳೆದುಕೊಂಡು ಅಣ್ಣನ ಆಶ್ರಯದಲ್ಲಿ ಬೆಳೆದ. ಶಾಲೆಯಲ್ಲಿದ್ದಾಗಲೇ 'ವಂದೇಮಾತರಂ' ಘೋಷಣೆ ಕೂಗಿ ಶಾಲೆಯಿಂದ ಹೊರ ಹಾಕಿಸಿಕೊಂಡ ಅಭಿಜಾತ

ಪುಟ 9 ಕ್ಕೆ ➢

# ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ ಕೇಂದ್ರದ 7ನೇ ವೇತನ ಆಯೋಗಕ್ಕೆ ಮನವಿ

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘವು ರಾಷ್ಟ್ರ ವ್ಯಾಪಿ ಸಂಘಟನೆಯಾಗಿದ್ದು ಶಿಕ್ಷಣ ಮತ್ತು ಸಮಾಜ ಕ್ಷೇತ್ರಗಳಲ್ಲಿ ಸಾಂಸ್ಕೃತಿಕ ರಾಷ್ಟ್ರೀಯತೆಯ ಸಿದ್ಧಾಂತವನ್ನು ಪ್ರಚುರಗೊಳಿಸುವ ಸಂಸ್ಥೆಯಾಗಿದೆ. ಮಹಾ ಸಂಘವು ಶಿಕ್ಷಕರ ವೇತನ ಮತ್ತು ಭತ್ಯೆಗಳು, ಸೇವಾ ನಿಯಮಗಳು ಹಾಗೂ ಇತರೆ ಸೌಲಭ್ಯಗಳನ್ನು ರಕ್ಷಿಸುವುದರೊಂದಿಗೆ ಅವರ ಸಾಮಾಜಿಕ ಕಳಕಳಿ ಮತ್ತು ಶೈಕ್ಷಣಿಕ ಉನ್ನತೀಕರಣಕ್ಕಾಗಿ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಎ.ಬಿ.ಆರ್.ಎಸ್.ಎಂ. ದೇಶದ 28 ರಾಜ್ಯಗಳ ಪ್ರಾಥಮಿಕ ಶಾಲಾ ಶಿಕ್ಷಕರಿಂದ ವಿಶ್ವವಿದ್ಯಾಲಯದ ಶಿಕ್ಷಕರುಗಳ ವ್ಯಾಪ್ತಿಗೆ ಒಳಪಟ್ಟ ವಿವಿಧ ಹಂತದ ಶಿಕ್ಷಕ ಸಂಘಟನೆಗಳನ್ನು ಸಂಲಗ್ನತ್ವ ಹೊಂದಿದ ಮಹಾ ಸಂಘ, ಎ.ಬಿ.ಆರ್.ಎಸ್.ಎಂ. ಧ್ಯೇಯ ರಾಷ್ಟ್ರಕೆ ಹಿತ್ ಮೈಶಿಕ್ಷ ಶಿಕ್ಷಾಕೆ ಹಿತ್ ಮೈಶಿಕ್ಷಕ್ ಮತ್ತು ಶಿಕ್ಷಕ್ ಕೆಹಿತ್ ಮೈಸಮಾಜ್. ಈ ಧ್ಯೇಯೋದ್ದೇಶವನ್ನು ಗಮನದಲ್ಲಿಟ್ಟುಕೊಂಡು ಕೇಂದ್ರದ 7ನೇ ವೇತನ ಆಯೋಗವು ವರದಿಯನ್ನು ಅಂತಿಮಗೊಳಿಸುವಾಗ ಮುಂದೆ ನೀಡುವ ಸಲಹೆಗಳಿಗೆ ಸೂಕ್ತವಾಗಿ ಪರಿಗಣಿಸುವಂತೆ ಮನವಿ ಮಾಡುತ್ತದೆ.

**1. ವೇತನ ಶ್ರೇಣಿ :** ಪ್ರತಿಭಾನ್ವಿತರನ್ನು ಆಕರ್ಷಿಸಿ ಶಿಕ್ಷಣ ಕ್ಷೇತ್ರದಲ್ಲಿ ಉಳಿಸಿಕೊಳ್ಳಲು ಶಿಕ್ಷಕರ ವೇತನ ಶ್ರೇಣಿಯು ಸರ್ಕಾರದ ಅದೇ ವರ್ಗದ ಇತರೆ ನೌಕರರ ವೇತನ ಶ್ರೇಣಿಗಿಂತ ಉತ್ತಮವಾಗಿರಬೇಕು. ಶಿಕ್ಷಕರು ವೃತ್ತಿಗೆ ಸೇರುವಾಗ ಅವರ ವಿದ್ಯಾರ್ಹತೆಯು ಉನ್ನತವಾಗಿರುತ್ತದೆ ಮತ್ತು ಶಿಕ್ಷಕರು ಜೀವನದಲ್ಲಿ ತಡವಾಗಿ ಉದ್ಯೋಗಕ್ಕೆ ಸೇರಿರುವುದರಿಂದ ಶಿಕ್ಷಕರ ವೇತನ ಶ್ರೇಣಿ ಉತ್ತಮವಾಗಿರಬೇಕಾದುದು ಅವಶ್ಯ. ಆದ್ದರಿಂದ ಶಿಕ್ಷಕರಿಗೆ ಮುಂದಿನ ವೇತನ ಶ್ರೇಣಿಯನ್ನು ಸಂಘವು ಸೂಚಿಸುತ್ತದೆ.

**2. ವಾರ್ಷಿಕ ಬಡ್ತಿ :** ವಾರ್ಷಿಕ ಬಡ್ತಿಯು ಮೂಲ ವೇತನದ 5% ರಷ್ಟು ಇರಬೇಕು (Basic pay+ Grade pay)

**3. ಪದೋನ್ನತಿ** (Promotion) 4,9,14,19 ಮತ್ತು 24 ವರ್ಷಗಳ ಸೇವೆಯ ನಂತರ ಅವರ ಅರ್ಹತಾ ದಿನಾಂಕದಿಂದ career Advancement scheme (CAS) ಸೌಲಭ್ಯವನ್ನು ನೀಡಬೇಕು.

**4. ಉನ್ನತ ಪದವಿ ಗಳಿಸಿದವರಿಗೆ ಬಡ್ತಿ:** M.Ed or M.B.A, M.Phill, Ph.D. ಮುಂತಾದ ಉನ್ನತ ಪದವಿ ಗಳಿಸಿದ ಶಿಕ್ಷಕರಿಗೆ ಕ್ರಮವಾಗಿ ಎರಡು ಮೂರು ಮತ್ತು ಐದು ಬಡ್ತಿಗಳನ್ನು ನೀಡಬೇಕು.

| | Existing pay Scales | | Proposed pay Scales | |
|---|---|---|---|---|
| | Running Pay Band | Grade Pay | Running Pay Band | Grade Pay |
| 1 | PB-1,5200-20200 | 1800 | PB-1,17700-68700 | 6300 |
| 2 | PB-1,5200-20200 | 1900 | PB-1,17700-68700 | 6600 |
| 3 | PB-1,5200-20200 | 2000 | PB-1,17700-68700 | 7000 |
| 4 | PB-1,5200-20200 | 2400 | PB-1,17700-68700 | 8200 |
| 5 | PB-1,5200-20200 | 2800 | PB-1,17700-68700 | 9500 |
| 6 | PB-2,9300-34800 | 4200 | PB-2, 34700-107100 | 14300 |
| 7 | PB-2,9300-34800 | 4600 | PB-2, 34700-107100 | 15600 |
| 8 | PB-2,9300-34800 | 4800 | PB-2, 34700-107100 | 16300 |
| 9 | PB-2,9300-34800 | 5400 | PB-2, 34700-107100 | 18400 |
| 10 | PB-3, 15600-39100 | 5400 | PB-353000-133000 | 20000 |
| 11 | PB-3, 15600-39100 | 6600 | PB-353000-133000 | 22500 |
| 12 | PB-3, 15600-39100 | 7600 | PB-353000-133000 | 25900 |
| 13 | PB-3, 15600-39100 | 8700 | PB-4, 108000-189700 | 29600 |
| 14 | PB-4, 37400-67000 | 8900 | PB-4, 108000-189700 | 30300 |
| 15 | PB-4, 37400-67000 | 10000 | PB-4, 108000-189700 | 34000 |
| 16 | PB-4, 37400-67000 | 12000 | PB-4, 108000-189700 | 40800 |
| 17 | 75000-80000 | HAG SCALE | 210000 | 0 |
| 18 | 80000 FIXED | APEX SCALE | 240000 | 0 |
| 19 | 90000 FIXED | APEX SCALE | 270000 | 0 |

## 5 ಭತ್ಯೆಗಳು


**1. ವೃತ್ತಿ ಭತ್ಯೆ:** ವೈದ್ಯರು ಮುಂತಾದವರಿಗೆ ನೀಡುವಂತೆ ಶಿಕ್ಷಕರಿಗೂ ವೃತ್ತಿ ಭತ್ಯೆಯನ್ನು ನೀಡಬೇಕು

**2. ಮನೆ ಬಾಡಿಗೆ ಭತ್ಯೆ:** ಎಲ್ಲಾ ಸ್ಥಳಗಳಲ್ಲಿ ಮೂಲ ವೇತನದ ಕನಿಷ್ಠ 20% ರಷ್ಟು ಇರಬೇಕು. ದೊಡ್ಡ ನಗರಗಳಲ್ಲಿರುವವರಿಗೆ 30% ರಷ್ಟು (ಮೂಲವೇತನ) ಇರಬೇಕು.

**3. ಶಿಕ್ಷಣ ಭತ್ಯೆ** (Academic Allowance) ಪುಸ್ತಕಗಳು ಮತ್ತು ನಿಯತಕಾಲಿಕೆಗಳನ್ನು ಕೊಳ್ಳಲು, ಅಂತರ್ಜಾಲ ಸೌಲಭ್ಯಗಳು ಮುಂತಾದವುಗಳಿಗಾಗಿ ರೂ 1000/

ಪುಟ 9 ಕ್ಕೆ ➢

## ಪರಿಚಯ



**ಅರುಣ ಶಹಾಪೂರ**

ಶಾಸಕರು ವಿಧಾನ ಪರಿಷತ್ತು
ವಾಯವ್ಯ ಶಿಕ್ಷಕರ ಮತಕ್ಷೇತ್ರ

ರಾಜ್ಯ ಕಾರ್ಯಾಧ್ಯಕ್ಷರು
ಕರ್ನಾಟಕ ರಾಜ್ಯ ಮಾಧ್ಯಮಿಕ
ಶಿಕ್ಷಕ ಸಂಘ, (ರಿ)

ರಾಜ್ಯ ಗೌರವಾಧ್ಯಕ್ಷರು
ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶೈಕ್ಷಿಕ ಸಂಘ

ಗೌರವಾಧ್ಯಕ್ಷರು
ಬೆಳಗಾವಿ ವಿಭಾಗ
ಕರ್ನಾಟಕ ರಾಜ್ಯ ಅನುದಾನಿತ
ಡಿ.ಎಡ್ ಕಾಲೇಜು ನೌಕರರ ಒಕ್ಕೂಟ

ಗೌರವಾಧ್ಯಕ್ಷರು
ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ
ದೈಹಿಕ ನಿರ್ದೇಶಕರ ಸಂಘ

ರಾಜ್ಯ ನಿರ್ದೇಶಕರು
ಕರ್ನಾಟಕ ರಾಜ್ಯ ಸೌಹಾರ್ದ
ಸಂಯುಕ್ತ ಸಹಕಾರಿ ನಿಯಮಿತ

ಸದಸ್ಯರು ಅಕ್ಯಾಡೆಮಿಕ್ ಕೌನ್ಸಿಲ್
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ

ಮಾಜಿ ಸಿಂಡಿಕೇಟ್ ಸದಸ್ಯರು
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ

ಮಾಜಿ ಸೆನೇಟ್ ಸದಸ್ಯರು
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ (ಎರಡು ಅವಧಿಗೆ)

ಮಾಜಿ ಅಧ್ಯಕ್ಷರು
ಭಯೋತ್ಪಾದನೆ ಅಳಿಸಿ ದೇಶ ಉಳಿಸಿ ಅಭಿಯಾನ
(ಕರ್ನಾಟಕ ಸರ್ಕಾರ) ಬೆಳಗಾವಿ ವಿಭಾಗ
1989 ರಿಂದ ಎ.ಬಿ.ವಿ.ಪಿ.ಯ
ಕಾರ್ಯಕರ್ತನಾಗಿ,
ಜಿಲ್ಲಾ ಪ್ರಮುಖನಾಗಿ,
ವಿಭಾಗ ಪ್ರಮುಖನಾಗಿ,
ರಾಜ್ಯ ಸಹ ಕಾರ್ಯದರ್ಶಿಯಾಗಿ,
ರಾಜ್ಯ ಶಿಕ್ಷಣ ಪ್ರಕೋಷ್ಠ ಸಂಚಾಲಕನಾಗಿ ಕಾರ್ಯ

# ಶಿಕ್ಷಕ ಬಂಧುಗಳೇ
# ಶಿಕ್ಷಕ ಮತದಾರ ಕ್ಷೇತ್ರಕ್ಕೆ ತಮ್ಮ ಮತ ನೊಂದಾಯಿಸಿಕೊಳ್ಳಿ

2016 ರ ಜೂನ್ ತಿಂಗಳಿನಲ್ಲಿ ವಾಯವ್ಯ ಶಿಕ್ಷಕ ಮತ ಕ್ಷೇತ್ರದ ಚುನಾವಣೆಗಳು ಬರಲಿದ್ದು, ಈಗ ಮತ ನೊಂದಾವಣೆಗೆ ಅಧಿಸೂಚನೆ ಹೊರಡಿಸಿದ್ದು, ಕಳೆದ ಬಾರಿ ನೊಂದಾವಣೆಗೊಂಡ ಶಿಕ್ಷಕ ಮತದಾರರ ಹೆಸರುಗಳು ಮುಂದುವರಿಯಲಿದ್ದು, ಮತದಾರರ ಪಟ್ಟಿಗೆ ಸೇರ್ಪಡೆ / ತೆಗೆದು ಹಾಕುವ ಪ್ರಕ್ರಿಯೆ ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಇರುವ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರಿರುವುದನ್ನು ದೃಢಪಡಿಸಿಕೊಳ್ಳಿ. ಬದಲಾವಣೆಗಳಿದ್ದರೆ ಅರ್ಜಿ ನೀಡಬೇಕು, ಹೊಸದಾಗಿ ಸೇರ್ಪಡೆಗೆ ಅವಕಾಶವಿದ್ದು, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಿ ಎಂದು ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಭಾರತದ ಸರ್ವತೋಮುಖ ಪ್ರಗತಿಗೆ ಶಿಕ್ಷಣ ಮೂಲಾಧಾರ, ಶಿಕ್ಷಕ ಅದರ ಆಧಾರ ಮತ್ತು ರಾಷ್ಟ್ರದ ಏಕಾತ್ಮತೆಯ ನಿರ್ಮಾಪಕ. ಮಕ್ಕಳಿಗೆ ಸತ್ವ ಪೂರ್ಣ ನೀತಿಯುಕ್ತ ಶಿಕ್ಷಣವನ್ನು ನೀಡಲು ಸೂತ್ರ ಬದ್ಧ ಸಂಘಟಿತ ಪ್ರಯತ್ನ ಅನಿವಾರ್ಯ. ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲ ಶಿಕ್ಷಕರು ಸಮಾಜ ಪರಿವರ್ತನೆಯ ಹರಿಕಾರರು. ಶಿಕ್ಷಕ–ಶಿಕ್ಷಣ–ಸಮಾಜ ಇವು ಒಂದಕ್ಕೊಂದು ಪೂರಕ. ಶಿಕ್ಷಣ ಕ್ಷೇತ್ರ ಸಮಾಜದ ಅಗತ್ಯಕ್ಕನುಗುಣವಾಗಿ ಬದಲಾಗಬೇಕಾಗಿರುವುದು ಇಂದಿನ ಅಗತ್ಯ. ಶಿಕ್ಷಕರ– ಶಿಕ್ಷಣ ಕ್ಷೇತ್ರದ ಸಮಸ್ಯೆ ಹಾಗೂ ಅಭಿವೃದ್ಧಿ ವಿಷಯಗಳನ್ನು ಶಾಸನ ಸಭೆಯಲ್ಲಿ ಹಾಗೂ ಹಲವು ಸರ್ಕಾರಿ ವೇದಿಕೆಗಳಲ್ಲಿ ಪರಿಣಾಮಕಾರಿಯಾಗಿ ಮಂಡಿಸಿ ಪರಿವರ್ತನೆಯನ್ನು ತರಬೇಕಾದ ಹಾಗೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಜವಾಬ್ದಾರಿಗಳನ್ನು ಶಿಕ್ಷಕ ಪ್ರತಿನಿಧಿಯಾಗಿ ನಾನು ಪ್ರಾಮಾಣಿಕವಾಗಿ ಮಾಡುತ್ತಿರುವುದು ತಮ್ಮೆಲ್ಲರಿಗೂ ತಿಳಿದ ವಿಷಯ.

ನನ್ನನ್ನು ವಿಧಾನ ಪರಿಷತ್ತಿನ ವಾಯವ್ಯ ಶಿಕ್ಷಕರ ಮತಕ್ಷೇತ್ರಕ್ಕೆ ಶಾಸಕನನ್ನಾಗಿ ತಾವುಗಳು ಆಶೀರ್ವದಿಸಿ ಆಯ್ಕೆ ಮಾಡಿದ ನಂತರ ನಿರಂತರವಾಗಿ ಶಿಕ್ಷಣ ಹಾಗೂ ಶಿಕ್ಷಕರ ಧ್ವನಿಯಾಗಿ ಸದನದಲ್ಲಿ, ಮಾಧ್ಯಮಗಳ ಮೂಲಕ, ಹೋರಾಟಗಳ ಮೂಲಕ, ನಾನು ಮಾಡುತ್ತಿರುವ ಕಾರ್ಯ ತಮ್ಮ ಗಮನಕ್ಕೆ ಸ–ವಿನಯದಿಂದ ತರಬಯಸುತ್ತೇನೆ. ಸಾಮಾಜಿಕ ಜಾಲತಾಣಗಳ ಮೂಲಕ ನಾನು ಮಾಡುತ್ತಿರುವ ಸಂವಹನದ ಪ್ರಯತ್ನ ತಮ್ಮೆಲ್ಲರಿಗೂ ತಿಳಿದ ವಿಷಯವಾಗಿದೆ. ನನ್ನ ಮತಕ್ಷೇತ್ರದ ವ್ಯಾಪ್ತಿಯ ನಾಲ್ಕೂ ಶೈಕ್ಷಣಿಕ ಜಿಲ್ಲೆಗಳ (33 ವಿಧಾನಸಭಾ ಮತಕ್ಷೇತ್ರ) ಸಾವಿರಾರು ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಿದ್ದು, ನಾನು ಗರಿಷ್ಠ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಸಂಪರ್ಕದಲ್ಲಿರುವ ಪ್ರಯತ್ನ ಮಾಡುತ್ತಿದ್ದೇನೆ. ಹಲವು ಸಂಸ್ಥೆಗಳ ಕಾರ್ಯಕ್ರಮಗಳು – ವಿಚಾರ ಸಂಕಿರಣಗಳು, ಕಾರ್ಯಾಗಾರಗಳು, ಸಮಸ್ಯೆ ನಿವಾರಣಾ ಸಭೆಗಳು, ಸಮಾಲೋಚನಾ ಸಭೆಗಳು, ಶಿಕ್ಷಕರ – ಉಪನ್ಯಾಸಕರ – ಪ್ರಾಧ್ಯಾಪಕರ ವಿವಿಧ ಸಂಘಟನೆಗಳ ಕಾರ್ಯಕ್ರಮಗಳು, ಸಮಾವೇಶಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದೇನೆ. ಮುಖ್ಯ ಗುರುಗಳ ಪ್ರಾಚಾರ್ಯರ ಮಹಾಮಂಡಳಗಳ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿದ್ದೇನೆ.

ಸಾಕಷ್ಟು ಸಮಸ್ಯೆಗಳ ಪರಿಹಾರದ ಸಾಧನೆ ಮಾಡಿದ್ದರೂ ಮಾಡಬೇಕಿರುವ ಸಂಗತಿಗಳು ಹಲವಾರು ಎನ್ನುವ ಅರಿವು ನನಗಿದೆ. ಈ ನಿಟ್ಟಿನಲ್ಲಿ ನಾನು ಮಾಡುವ ಪ್ರಾಮಾಣಿಕ ಪ್ರಯತ್ನಕ್ಕೆ ನಿಮ್ಮೆಲ್ಲರ ಸಹಕಾರದ ಆಶೀರ್ವಾದ ಎಂದಿನಂತೆ ನನ್ನ ಮೇಲಿರಲಿ.

ಹಲವಾರು ಆಕಾಂಕ್ಷಿಗಳು ತಮ್ಮ ವೈಭವಿತ ಭರವಸೆಗಳೊಂದಿಗೆ ಕ್ಷೇತ್ರಾದ್ಯಂತ ಸಂಚರಿಸುವ ಸಂದರ್ಭದಲ್ಲಿ ಅಬ್ಬರದ ಚುನಾವಣೆ ಈಗಲೇ ಆರಂಭಿಸಿರುವ ವಾತಾವರಣದಲ್ಲೂ ನಾನು ವಿವಿಧ ವೇದಿಕೆಗಳ ಮೂಲಕ ನಿಮ್ಮ ಪರವಾಗಿ ಕಾರ್ಯನಿರತನಾಗಿದ್ದು, ಎಷ್ಟು ಬಾರಿ ತಮ್ಮನ್ನು ಭೇಟಿಯಾದೆ ಎನ್ನುವುದಕ್ಕಿಂತ ಎಷ್ಟು ಪರಿಣಾಮಕಾರಿಯಾಗಿ ತಮ್ಮ ಧ್ವನಿಯಾಗಿದ್ದೇನೆ ಎನ್ನುವುದನ್ನು ತಾವು ಪರಿಗಣಿಸಲು ವಿನಂತಿಸುತ್ತೇನೆ. ಬರಲಿರುವ ದಿನಗಳಲ್ಲಿ ನಾನು ತಮ್ಮನ್ನು ಭೇಟಿಯಾಗಿ ತಮ್ಮೊಂದಿಗೆ ಹಲವು ವಿಷಯಗಳನ್ನು ಹಂಚಿಕೊಳ್ಳುವೆ. ನಿಮ್ಮ ಪ್ರೀತಿ, ವಿಶ್ವಾಸ, ಅಶೀರ್ವಾದ ಎಂದಿನಂತೆ ನನ್ನ ಜೊತೆಗಿರಲಿ. ತಮ್ಮ ವಿಶ್ವಾಸವೇ ನನ್ನ ಪರಿಣಾಮಕಾರಿ ಕಾರ್ಯ ನಿರ್ವಹಣೆಗೆ 'ಶ್ರೀ ರಕ್ಷೆ.

ಅರ್ಹತೆಗಳು : ಭಾರತದ ಪ್ರಜೆಯಾಗಿರುವ ಆಯಾ ಮತ ಕ್ಷೇತ್ರದೊಳಗಡೆ ಸಾಮಾನ್ಯವಾಗಿ ವಾಸಿಸುತ್ತಿರುವ ಹಾಗೂ 1ನೇ ನವೆಂಬರ್ 2015 ಕ್ಕೆ ಮೊದಲು 6 ವರ್ಷದೊಳಗೆ ದರ್ಜೆಯಲ್ಲಿ ಸೆಕೆಂಡರಿ ಶಾಲೆಗಿಂತ ಕಡಿಮೆಯದಲ್ಲವೆಂದು ನಿರ್ದಿಷ್ಟಪಡಿಸಿದಂತ ರಾಜ್ಯದೊಳಗಿನ ಯಾವುದೇ ಅನುದಾನಿತ / ಅನುದಾನರಹಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಒಟ್ಟು ಕನಿಷ್ಟ 3 ವರ್ಷ ಬೋಧನಾ ವೃತ್ತಿಯಲ್ಲಿ ನಿರತರಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಮತದಾರ ಪಟ್ಟಿಯಲ್ಲಿ ತನ್ನ ಹೆಸರನ್ನು ಸೇರಿಸಲು ಅರ್ಹನಾಗಿರುತ್ತಾನೆ. ಹಾಗೆ ನಿರ್ದಿಷ್ಟಪಡಿಸಿದ ಶೈಕ್ಷಣಿಕ ಸಂಸ್ಥೆಗಳ ಪಟ್ಟಿಯು ಮೊದಲನೆಯ ಅನುಸೂಚಿಯಲ್ಲಿ ತಿಳಿಸಲಾದ ಅಧಿಕಾರಿಗಳ ಬಳಿ ಇರುತ್ತದೆ.

### ಭಾರತದ ಚುನಾವಣಾ ಆಯೋಗ

# ಕರ್ನಾಟಕ ವಿಧಾನ ಪರಿಷತ್ತಿನ ಶಿಕ್ಷಕರ ಮತಕ್ಷೇತ್ರಗಳ ಮತದಾರರ ಪಟ್ಟಿಯ ಪರಿಷ್ಕರಣೆ

**ಮತದಾರರ ನೋಂದಣಿ ನಿಯಮಗಳು, 1980 ರ 31(4) ನೇ ನಿಯಮದ ಮೇರೆಗೆ ಸೂಚನೆ**

ಮತದಾರರ ನೋಂದಣಿ ನಿಯಮಗಳು,1960ರ 31(3) ನೇ ನಿಯಮದ ಅನುಸಾರ, (1) ಕರ್ನಾಟಕ ವಾಯುವ್ಯ ಶಿಕ್ಷಕರ (2) ಕರ್ನಾಟಕ ಪಶ್ಚಿಮ ಶಿಕ್ಷಕರ ಕ್ಷೇತ್ರಗಳ ಮತದಾರರ ನೋಂದಣಾಧಿಕಾರಿಯವರು ದಿನಾಂಕ 1ನೇ ಅಕ್ಟೋಬರ್ 2015 ರಂದು ಪ್ರಕಟಿಸಿರುವ ಅವರ ಸೂಚನೆಯಲ್ಲಿ ಮೇಲೆ ನಮೂದಿಸಿದ ಶಿಕ್ಷಕರ ಮತಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಲು ಹಕ್ಕುಳ್ಳ ಮತ್ತು ಕರಡು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಆಗದೇ ಇರುವ ಪ್ರತಿಯೊಬ್ಬ ವ್ಯಕ್ತಿಯು ಮತದಾರರ ನೋಂದಣಿ ನಿಯಮಗಳು 1960 ಕ್ಕೆ ಲಗತ್ತಿಸಿರುವ ಮತ್ತು ದಿನಾಂಕ 1ನೇ ಅಕ್ಟೋಬರ್ 2015ರ (1) ಡೆಕ್ಕನ್ ಹೆರಾಲ್ಡ್ ಮತ್ತು (2) ವಿಜಯ ಕರ್ನಾಟಕ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುವ ಎರಡನೇ ಅನುಸೂಚಿಯಲ್ಲಿ ಪುನರುಚ್ಚರಿಸಿರುವ ನಮೂನೆ –19ರಲ್ಲಿ ಅರ್ಜಿಯನ್ನು 16ನೇ ನವೆಂಬರ್, 2015 ಅಥವಾ ಅದಕ್ಕೂ ಮೊದಲು ಅವರ ಕಛೇರಿಗೆ ಕಳುಹಿಸಲು ಅಥವಾ ತಲುಪಿಸಲು ಕರೆ ನೀಡಿದ್ದರು.

ಮೇಲೆ ತಿಳಿಸಲಾದ ಎಲ್ಲಾ ವ್ಯಕ್ತಿಗಳ, ಇದುವರೆವಿಗೂ ಅರ್ಜಿ ಸಲ್ಲಿಸದೇ ಇದ್ದಲ್ಲಿ, ನಮೂನೆ –19ರಲ್ಲಿ ಅರ್ಜಿಯನ್ನು ದಿನಾಂಕ 16ನೇ ನವೆಂಬರ್, 2015ರಂದು ಅಥವಾ ಅದಕ್ಕೂ ಮೊದಲು ಸಲ್ಲಿಸಬಹುದು.

ಮೇಲ್ಕಂಡ ವಿವರಗಳು ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ ಇವರ ಅಂತರ್ಜಾಲ ತಾಣ **www.ceokarnataka.kar.nic.in** ರಲ್ಲಿ ಸಹ ಲಭ್ಯವಿದೆ.

**ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ**

# ಸವೆದು ಹೋದ ಓಝೋನ ಪದರು ಮರಳಿ ಪಡೆಯಲು ಸಾಧ್ಯವಿಲ್ಲ ರಕ್ಷಣೆಗೆ ಜಾಗೃತಿ ಅವಶ್ಯ

ದಿನೇ ದಿನೇ ನಾಶವಾಗುತ್ತಿರುವ ಓಝೋನ ಪದರು ಮರಳಿ ಪಡೆಯಲು ಸಾಧ್ಯವಿಲ್ಲ ಓಝೋನ ಪದರದ ಮಹತ್ವ ಮತ್ತು ಅದರ ನಾಶದಿಂದಾಗುವ ಪರಿಣಾಮದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು ಮಕ್ಕಳ ಮೂಲಕ ಸಮಾಜದ ಪ್ರತಿಯೊಬ್ಬರಿಗೂ ತಲುಪಬೇಕು ಮಠ, ಮಂದಿರ, ಮಸೀದಿ ಹಾಗೂ ಚರ್ಚಗಳಲ್ಲಿ ಜಾಗೃತಿ ಮೂಡಿಸುವ ಚರ್ಚೆಯಾಗಬೇಕಾಗಿದೆ. ಎಲ್ಲರೂ ಸಾಮೂಹಿಕ ಸಂಕಲ್ಪ ಮಾಡಿ ಓಝೋನ ರಕ್ಷಿಸಿ ಭೂಜೀವ ಸಂಕುಲ ಉಳಿಸೋಣ ಬನ್ನಿ. ನಾವೆಲ್ಲರು ಕೂಡಿ ಪರಿವರ್ತನೆಗೆ ಮುಂದಾಗೋಣ ಎಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಲಬುರಗಿ ಜಿಲ್ಲಾ ಘಟಕದ ಅಧ್ಯಕ್ಷ ಚಂದ್ರಶೇಖರ ಎಸ್. ಪಾಟೀಲ ಕರೆ ನೀಡಿದರು. ಆಳಂದ ಪಟ್ಟಣದ ಲೋಕನಾಯಕ ಜಯಪ್ರಕಾಶ ನಾರಾಯಣ ಪ್ರೌಢ ಶಾಲೆಯಲ್ಲಿ ತಾಲೂಕ ಘಟಕ ಆಯೋಜಿಸಿದ್ದ ವಿಶ್ವ ಓಝೋನ್ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ರಾಜ್ಯ ಸಂಪನ್ಮೂಲ ವ್ಯಕ್ತಿ ಶ್ರೀ ಸೋಮಶೇಖರ ಹಿರೇಮಠ ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಓಜೋನ್ ಪದರು ಸವೆಯುತ್ತಿರುವುದಕ್ಕೆ ಪ್ರಮುಖ ಕಾರಣವೆಂದರೆ ಕ್ಲೋರೋಪ್ಲೋರೋ ಕಾರ್ಬನ್‌ಗಳು ವಾತಾವರಣಕ್ಕೆ ಬಿಡುಗಡೆಯಾಗುತ್ತಿರುವುದು ಇವುಗಳು ಇನ್ಸುಲೇಟಿಂಗ್ ಪೋಮಗಳು ಶಿಥಲೀಕರಣ ಯಂತ್ರ, ರೆಫ್ರೀಜಿರೇಟರಗಳಿಂದ ಬಿಡುಗಡೆಯಾಗುತ್ತಿವೆ. ಇವುಗಳಿಂದ ಹಾನಿಗೊಳಗಾದ ಓಜೋನ ಪದರುಗಳ ಮೂಲಕ ನೇರಳಾತೀತ ಕಿರಣಗಳು ನೇರವಾಗಿ ಭೂಮಿಯನ್ನು ತಲಪುವುದರಿಂದ ಜೀವಿಗಳಲ್ಲಿ ಉತ್ಪರಿವರ್ತನೆಗಳು ಜಾಗತಿಕ ತಾಪಮಾನ ಸ್ಮಾರಕಗಳ ನಾಶ ಮುಂತಾದ ಪರಿಸರದ ಸಮಸ್ಯೆಗಳು ಉಂಟಾಗುತ್ತವೆ ಎಂದು ಹೇಳಿದರು.

ಸಂಸ್ಥೆಯ ಆಡಳಿತಾಧಿಕಾರಿಗಳಾದ ಶ್ರೀ ಮಹಾದೇವಪ್ಪ ಪಾಟೀಲ ಸಸಿಗೆ ನೀರು ಹಾಕುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಅವರು ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯವನ್ನು ಶ್ಲಾಘಿಸಿದರು. ವೇದಿಕೆಯ ಮೇಲೆ ಸಂಘದ ತಾಲುಕು ಘಟಕದ ಗೌರವ ಅಧ್ಯಕ್ಷ ಶ್ರೀಶೈಲ ಮಾಳಗೆ, ಜ್ಞಾನ ವಿಜ್ಞಾನ ಸಮಿತಿ ಅಧ್ಯಕ್ಷ ಶ್ರೀಶೈಲ ಮಾಡ್ಯಾಳೆ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಮುಖ್ಯಗುರುಗಳಾದ ಶ್ರೀ ಎಲ್. ಎಸ್.ಬೀದಿ ವಹಿಸಿದ್ದರು. ಬಸವರಾಜ ಕಡಗಂಚಿ ಸ್ವಾಗತಿಸಿದರು ಸತೀಶ ಕೋಗನೂರೆ ನಿರೂಪಿಸಿದರು.

ವರದಿ : ಶ್ರೀ ಮಹೇಶ ಆರ್ ಬಸರಕೋಡ, ವಿಭಾಗ ಪ್ರಮುಖರು ಕಲಬುರಗಿ

➢ ಪುಟ 5 ರಿಂದ..... ಶಾಲೆಯಲ್ಲದ ಶಾಲೆ ...

ದೇಶಭಕ್ತ. ತಾಯಿ ಇಲ್ಲದ ಬಾಲಕ ಕೇಶವ ಭಾರತ ಮಾತೆಯನ್ನು ತನ್ನ ತಾಯಿಯಾಗಿ ಸ್ವೀಕರಿಸಿದ ಆಕೆಯ ಮುಕ್ತಿ, ವೈಭವಗಳೇ ತನ್ನ ಜೀವನದ ಗುರಿಯನ್ನಾಗಿ ಸ್ವೀಕರಿಸಿದ. ವೈದ್ಯಕೀಯ ಪದವಿಗಾಗಿ ಓದುತ್ತಿರುವಾಗಲೇ ಸ್ವಾತಂತ್ರ್ಯ ಹೋರಾಟದ ವಿವಿಧ ಆಂದೋಲನಗಳಲ್ಲಿ ತೊಡಗಿಸಿಕೊಂಡ ನಂತರ ತಾವು ಸಾಕ್ಷಾತ್ಕರಿಸಿಕೊಂಡ ಸತ್ಯದ ಹಾದಿಯಲ್ಲಿ ದೇಶ ಬಾಂಧವರನ್ನು ಮುನ್ನಡೆಸಲು ಪ್ರಾರಂಭಿಸಿದ ಸಂಘಟನೆಗೆ ಹೆಸರಿಟ್ಟದ್ದು "ರಾಷ್ಟ್ರೀಯ ಸ್ವಯಂಸೇವಕ ಸಂಘ". ಒಂದು ಗಂಟೆಯ ಅದರ ಕಾರ್ಯಚಟುವಟಿಕೆ ನಡೆಯುವುದು 'ಸಂಘದ ಶಾಖೆ' ಎಂಬ ಶಾಲೆಯಲ್ಲಿ. ಇಂದು ಸಂಘದ ಶಾಖೆಗಳು ದೇಶೋವಿಶಾಲವಾಗಿ ಹಬ್ಬಿವೆ. ಇಷ್ಟೇ ಅಲ್ಲ ಆಸ್ಟ್ರೇಲಿಯಾ, ಆಫ್ರೀಕಾ, ಅಮೆರಿಕಾ, ಇಂಗ್ಲೆಂಡ್ ಮುಂತಾದ ಜಗತ್ತಿನ ವಿವಿಧ ದೇಶಗಳಲ್ಲಿನ ಭಾರತೀಯ ಅನಿವಾಸಿಗಳಲ್ಲೂ ಇಂಥದೇ ಶಾಖೆಗಳು ನಡೆಯುತ್ತಿದ್ದು, ಅಲ್ಲಿನ ಬಾಲ- ತರುಣರೂ ಭಾರತೀಯ ಮೌಲ್ಯಗಳ ಸಂಸ್ಕಾರ ಪಡೆಯುತ್ತಿದ್ದಾರೆ. ಇಂದು ಆರ್.ಎಸ್.ಎಸ್ ಜಗತ್ತಿನ ಅತಿದೊಡ್ಡ ಸ್ವಯಂಸೇವಾ ಸಂಘಟನೆ ಎಂದು ಹೆಸರು ಗಳಿಸಿದೆ.

ಈ ತೆರೆದ ಮೈದಾನ ಶಾಲೆಗಳಲ್ಲಿ ಶಿಕ್ಷಣ ಪಡೆದ ಸಾವಿರಾರು ಯುವಕರು ತಮ್ಮ ಜೀವನವನ್ನು ದೇಶಕಾರ್ಯಕ್ಕಾಗಿ ಮುಡುಪಿಟ್ಟು ಸನ್ಯಸ್ತ ಜೀವನ ನಡೆಸುತ್ತಿದ್ದಾರೆ. ಲಕ್ಷಾಂತರ ಜನ ವಿವಿಧ ಸಾಮಾಜಿಕ ಸೇವಾ ಚಟುವಟಿಕೆಗಳಲ್ಲಿ ತನು-ಮನ-ಧನ ಪೂರ್ವಕ ತೊಡಗಿಸಿಕೊಂಡಿದ್ದಾರೆ. ಇವರೆಲ್ಲರ ಜೀವನ ವ್ರತ 'ತನಗಾಗಿ ಸ್ವಲ್ಪ- ಸಮಾಜಕ್ಕೆ ಸರ್ವಸ್ವ'. ಹೀಗಾಗಿ ಆರ್.ಎಸ್.ಎಸ್. ಜನ್ಮ ತಳೆದ 90 ವರ್ಷಗಳಾಗುತ್ತಿರುವ ಈ ಸಂದರ್ಭದಲ್ಲಿ ರಾಷ್ಟ್ರ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಅದರ ಸ್ಥಾಪಕ ಡಾ॥ ಹೆಡಗೆವಾರ್ ಅವರು ಅಪೇಕ್ಷಿಸಿದ ಬದಲಾವಣೆಯ ಹೊಂಗಿರಣಗಳು ಪ್ರಖರವಾಗಿ ಮೂಡುತ್ತಿರುವುದನ್ನು ನಾವಿಂದು ಕಾಣಬಹುದು. ●

## ವಿಶೇಷ ತರಗತಿ ಆದೇಶ ಹಿಂಪಡೆಯಲಿ

**ಶಿಕ್ಷಣ ಇಲಾಖೆಯ ಅಧಿಕಾರಿಗಳು ದಸರಾ ರಜೆಯಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸಬೇಕೆಂದು ಒತ್ತಾಯಿಸುತ್ತಿರುವ, ಶೈಕ್ಷಣಿಕ ದೃಷ್ಟಿಯಿಂದ ಅವೈಜ್ಞಾನಿಕವೆಂದೂ, ಇದರಿಂದ ದುಷ್ಪರಿಣಾಮವೇ ಅಗುವುದೆಂದೂ ಕೂಡಲೇ ಈ ರೀತಿಯ ಆದೇಶಗಳನ್ನು ಹಿಂಪಡೆಯಬೇಕೆಂದೂ ಶಾಸಕ ಅರುಣ್ ಶಹಾಪೂರ ಮಾನ್ಯ ಶಿಕ್ಷಣ ಸಚಿವರಿಗೆ ದಿನಾಂಕ 13.10.2015 ರಂದು ಪತ್ರ ಬರೆದು ಒತ್ತಾಯಿಸಿದ್ದಾರೆ.**

➢ ಪುಟ 6 ರಿಂದ..... 7ನೇ ವೇತನ...

ರೂ 2000/, ರೂ 3000/ ರೂ 4000/ ರೂಪಾಯಿಗಳನ್ನು ಶಿಕ್ಷಕರ ವೃಂದ 1,2,3 ಮತ್ತು 4 ಗಳಿಗೆ ಅನುಗುಣವಾಗಿ ನೀಡುವುದು.

**4. ರಜೆ ಪ್ರವಾಸ ಸೌಲಭ್ಯ** (LTC) ಪ್ರತಿ ಎರಡು ವರ್ಷಗಳಿಗೊಮ್ಮೆ ರಜೆ ಪ್ರವಾಸ ಸೌಲಭ್ಯವನ್ನು ಎಲ್ಲಾ ಶಿಕ್ಷಕರಿಗೂ ನೀಡುವುದು.

**5.ಮಕ್ಕಳ ಶೈಕ್ಷಣಿಕ ಭತ್ಯೆ:** ಶಿಕ್ಷಕರ ಇಬ್ಬರು ಮಕ್ಕಳ ಶಿಕ್ಷಣವನ್ನು ಸರಿದೂಗಿಸಲು ಮಕ್ಕಳ ಪೂರ್ಣ ಶುಲ್ಕವನ್ನು ಭತ್ಯೆಯಾಗಿ ನೀಡಬೇಕು.

**6. ಗುಡ್ಡ ಪ್ರದೇಶ/ ದೂರ ಪ್ರದೇಶ ಭತ್ಯೆ :** ಗುಡ್ಡ ಪ್ರದೇಶ ಮತ್ತು ದೂರ ಪ್ರದೇಶ (ಹಿಂದುಳಿದ ಪ್ರದೇಶ) ಗಳಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಪ್ರತಿ ತಿಂಗಳೂ ಅವರ ಮೂಲ ವೇತನದ 10 % ನ್ನು ವಿಶೇಷ ಭತ್ಯೆಯಾಗಿ ನೀಡಬೇಕು

**7. ಮುಖ್ಯ ಶಿಕ್ಷಕರು ಮತ್ತು ಪ್ರಾಂಶುಪಾಲರಿಗೆ ವಿಶೇಷ ಭತ್ಯೆಗಳು:** ಶಾಲಾ ಮುಖ್ಯ ಶಿಕ್ಷಕರಿಗೆ, ಶಾಲಾ ಪ್ರಾಂಶುಪಾಲರಿಗೆ ಯು ಜಿ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಸ್ನಾತಕೋತ್ತರ ಕಾಲೇಜುಗಳ (ಪಿ ಜಿ ) ಪ್ರಾಂಶುಪಾಲರುಗಳಿಗೆ ಮಾಹೆಯಾನ ಕ್ರಮವಾಗಿ 2000/, 3000/, 4000/, 5000/ ರೂ. ಗಳ ಭತ್ಯೆಯನ್ನು ನೀಡುವುದು ಈ ಸೌಲಭ್ಯವನ್ನು ಉಪ ಪ್ರಾಂಶುಪಾಲರುಗಳಿಗೂ ವಿಸ್ತರಿಸುವುದು

ಮತ್ತಷ್ಟು ವಿವರಗಳು (ಮುಂದಿನ ಸಂಚಿಕೆಯಲ್ಲಿ...)

## ವಿದ್ಯಾರ್ಥಿ ಮಿತ್ರ – 20 ರ ಉತ್ತರ

### 1. ರಸಪ್ರಶ್ನೆ :


**1. ಕಂದು ; 2. ಜಿರಾಫೆ ; 3. ಸಕ್ಕರೆ ; 4. ಗೌರಿಬಿದನೂರು ; 5. 3410 ಡಿಗ್ರಿ ಸೆಂಟಿಗ್ರೇಡ್ ; 6. ಬಿಹಾರ ; 7. ಕೋಲ್ ಇಂಡಿಯಾ ಲಿಮಿಟೆಡ್ ; 8. ಸೂರ್ಯನ ವಿಕಿರಣಗಳನ್ನು ಅಳೆಯುವ ಸಾಧನ ; 9. ಮಾರ್ಚ್ 21 ; 10. ಮೈಲುತುತ್ತ ; 11. ಜಲಜನಕ 12. ಆಯುರ್ವೇದ ; 13. ಅಮೆರಿಕ ; 14. ಗಂಡು ಕುದುರೆಗೆ 40, ಹೆಣ್ಣು ಕುದುರೆಗೆ 36 ; 15. ಕಾಳಿ ನದಿ**

### 2. ಕರ್ನಾಟಕದ ರಾಜ್ಯಪಾಲರಾಗಿದ್ದ ಇವರನ್ನು ಗುರುತಿಸಬಲ್ಲಿರಾ ?

**1. ಟಿ. ಎನ್. ಚತುರ್ವೇದಿ ; 2. ವಿ. ಎಸ್. ರಮಾದೇವಿ ; 3. ರಾಮೇಶ್ವರ ಠಾಕೂರ್ ; 4. ಭಾನು ಪ್ರತಾಪ್ ಸಿಂಗ್.**

- **ಹೊಗಳಿದರೆಂದು ಹಿಗ್ಗಬಾರದು. ಅವಮಾನಿಸಿದರೆಂದು ಕುಗ್ಗಲೂ ಬಾರದು. ಲೋಕದಲ್ಲಿ ಮಾನಾಪಮಾನಗಳು ಕ್ಷಣಿಕವಾದವುಗಳೇ ಹೊರತು ಶಾಶ್ವತವಾಗಿ ಇರುವುದಿಲ್ಲ. ಸಜ್ಜನರನ್ನು ಗೌರವಿಸುವುದೇ ಸಜ್ಜನರ ಸ್ವಭಾವ.**
- **ದುರ್ಜನರು ಸಾತ್ವಿಕರನ್ನು ಎಂದೂ ಸತ್ಕರಿಸುವುದಿಲ್ಲ. ಸಜ್ಜನರ ಸದ್ಗುಣಗಳನ್ನೂ ಅವರು ದೋಷವೆಂದೇ ಭಾವಿಸುತ್ತಾರೆ.**

# ಶಿಕ್ಷಣ ತಜ್ಞ ಪ್ರೊ|| ಮುಡಂಬಡಿತ್ತಾಯ ಇನ್ನಿಲ್ಲ



ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ನೂತನ ಪಠ್ಯಕ್ರಮಕ್ಕೆ ವಿಶೇಷ ರೂಪ ನೀಡಿದ ಶಿಕ್ಷಣ ತಜ್ಞ, ಹೊಸ ದಿಗಂತದ ಅಂಕಣಕಾರ ಪ್ರೊ|| ಜಿ.ಎಸ್. ಮುಡಂಬಡಿತ್ತಾಯ ಶುಕ್ರವಾರ ಬೆಳಗ್ಗೆ ನಿಧನ ಹೊಂದಿದರು.

ಕಳೆದ 2 ವರ್ಷಗಳಿಂದ ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು, ಸ್ವಲ್ಪ ದಿನಗಳ ಹಿಂದೆ ಚಿಕಿತ್ಸೆ ಮಾಡಿಸಿಕೊಂಡಿದ್ದರು. ಅಕ್ಟೋಬರ್ 12ರಂದು ಆಂತರಿಕ ರಕ್ತಸ್ರಾವದಿಂದಾಗಿ ಶಂಕರ ಆಸ್ಪತ್ರೆಗೆ ದಾಖಲಾಗಿದ್ದರು. ಅಕ್ಟೋಬರ್ 14 ರ ಮಧ್ಯರಾತ್ರಿ ಪ್ರಜ್ಞಾಹೀನರಾಗಿದ್ದು, ಚಿಕಿತ್ಸೆ ನೀಡಲಾಗಿದ್ದರೂ, ಫಲಿಸದೆ ಶುಕ್ರವಾರ ಬೆಳಗಿನ ಜಾವ ಇಹಲೋಕ ತ್ಯಜಿಸಿದರು. ಇವರು ಪತ್ನಿ ಜಿ.ಎಸ್. ಪ್ರೇಮ ಪುತ್ರಿಯರಾದ ಗೀತಾ, ಚಂದ್ರಿಕಾ, ಜಯಶ್ರೀ ಹಾಗೂ ಮೂವರು ಮೊಮ್ಮಕ್ಕಳನ್ನು ಅಗಲಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿಯ ಬಜತ್ತುರುವಿನಲ್ಲಿ 1935 ಮಾರ್ಚ್ 23 ರಂದು ಜನಿಸಿದ ಇವರು ಬಿ.ಎ, ಬಿಎಡ್ ಪದವಿ ಪಡೆದು 1958 ರಲ್ಲಿ ಸರ್ಕಾರಿ ಸೇವೆ ಪ್ರವೇಶಿಸಿದರು. ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿ ವಿದ್ಯಾರ್ಥಿಗಳೊಂದಿಗೆ ಭಾವಪೂರ್ಣವಾದ ಬಾಂಧವ್ಯ ಬೆಳೆಸಿಕೊಂಡಿದ್ದರು. ಎಂ. ಎ. ಎಕನಾಮಿಕ್ಸ್, ಇಂಗ್ಲೀಷ್, ಎಂ.ಎಡ್ (2ನೇ ರ್‍ಯಾಂಕ್) ಪದವೀಧರರಾಗಿ ಪ್ರಾದೇಶಿಕ ಆಂಗ್ಲ ಭಾಷಾ ತರಬೇತಿ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ, ಸರ್ಕಾರಿ ಕಿರಿಯ ಕಾಲೇಜು ಪ್ರಾಂಶುಪಾಲರಾಗಿ, ಲಂಡನ್‌ನಲ್ಲಿರುವ ಕಾಮನ್ವೆಲ್ತ್ ಇನ್ಸ್‌ಟಿಟ್ಯೂಟ್‌ನಲ್ಲಿ ಸಂದರ್ಶಕ ಉಪನ್ಯಾಸಕರಾಗಿ, ಪಿಯುಸಿ ಬೋರ್ಡ್‌ನ ಹಿರಿಯ ಸಹಾಯಕ ನಿರ್ದೇಶಕರಾಗಿ ಸೇವೆ ಸಲ್ಲಿಸಿ 1993 ರಲ್ಲಿ ನಿವೃತ್ತರಾದರು. ಶಿಕ್ಷಣ ಇಲಾಖೆ ಶೈಕ್ಷಣಿಕ ಸಲಹೆಗಾರರಾಗಿ, ಕರ್ನಾಟಕ ರಾಜ್ಯ ಪಠ್ಯಕ್ರಮ ಪರಿಷ್ಕರಣೆ ಹಾಗೂ ಪಠ್ಯಕ್ರಮ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಕರ್ನಾಟಕ ತಮಿಳುನಾಡು ಹಾಗೂ ಕೇರಳ ರಾಜ್ಯಗಳಿಗಾಗಿ 50 ಕ್ಕೂ ಹೆಚ್ಚು ಆಂಗ್ಲ ಭಾಷಾ ಪಠ್ಯ ಪುಸ್ತಕಗಳನ್ನು ರಚಿಸಿಕೊಟ್ಟಿದ್ದಾರೆ. ವಿದ್ಯಾರ್ಥಿಗಳಿಗಾಗಿ ಸೇತುಬಂಧ ರಚನೆ, ಆಂಗ್ಲಭಾಷಾ ಶಿಕ್ಷಕ ತರಬೇತಿ 50 ಮಾಡೆಲ್‌ಗಳಿರುವ ಮಾರ್ಗದರ್ಶನ ಪುಸ್ತಕ, ಹಲವು ಶಿಕ್ಷಣ ಸಂಸ್ಥೆಗಳಿಗೆ 50 ಕ್ಕೂ ಹೆಚ್ಚು ಕಾರ್ಯಾಗಾರ, ಹಲವು ಸಮ್ಮೇಳನಗಳಲ್ಲಿ 40 ಕ್ಕೂ ಹೆಚ್ಚು ಪ್ರಬಂಧ ಮಂಡನೆ, ಹೊಸ ದಿಗಂತ ಸೇರಿದಂತೆ ಹಲವು ದಿನಪತ್ರಿಕೆಗಾಗಿ ನೂರಕ್ಕೂ ಹೆಚ್ಚು ಲೇಖನ, 50ಕ್ಕೂ ಹೆಚ್ಚು ಆಕಾಶವಾಣಿ ಕಾರ್ಯಕ್ರಮಗಳಿಗೆ ಲೇಖನ, ಸುಮಾರು 20ಕ್ಕೂ ಹೆಚ್ಚು ಮಾರ್ಗದರ್ಶನ ಕಾರ್ಯಕ್ರಮಗಳಿಗೆ ಲೇಖನ ಬರೆದು ಪ್ರಸ್ತುತ ಪಡಿಸಿದ್ದರು.

ಬೆಳಕು ನೆರಳು ಒಂದು ಕಾದಂಬರಿ, ಭಾರತ ಶಿಲ್ಪಿಗಳು ಅನುವಾದ ಕೃತಿ, ಪಟ್ಟಮಹಾದೇವಿ ಶಾಂತಲೆಯ ಐದು ಸಂಪುಟಗಳನ್ನು ಇಂಗ್ಲೀಷ್‌ಗೆ ಭಾಷಾಂತರ ಮಾಡಿದ್ದರು. ಮಹಾಭಾರತ, ರಾಮಾಯಣ, ಮಹರ್ಷಿಗಳು, ವೇದೋಪನಿಷತ್ತುಗಳ ಮಹಾ ಪಾತ್ರಗಳು ಹಾಗೂ ಪುರಾಣಗಳ ಮಹಾಪಾತ್ರಗಳು, ಮಕ್ಕಳಿಗಾಗಿ ಐವತ್ತು ಪುಸ್ತಕಗಳನ್ನು ಇಂಗ್ಲೀಷ್ ಭಾಷಾಂತರ ಮಾಡಿ, ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಸಿಡಿಗಳ ಚಿತ್ರ ರಚಿಸಿ ಹೊರತಂದಿದ್ದಾರೆ.

ಶಿಕ್ಷಣ ಕ್ಷೇತ್ರಕ್ಕೆ ಇವರ ಸೇವೆಯನ್ನು ಪರಿಗಣಿಸಿ 1989 ರಲ್ಲಿ ರಾಷ್ಟ್ರಪತಿ ಆರ್. ವೆಂಕಟರಾಮನ್ ರಿಂದ ರಾಷ್ಟ್ರಪ್ರಶಸ್ತಿ, 2005 ರಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳ ಸುವರ್ಣ ರಾಜ್ಯೋತ್ಸವ ಪ್ರಶಸ್ತಿ, ಲಯನ್ಸ್, ರೋಟರಿಗಳ ಪ್ರಶಸ್ತಿಗಳನ್ನೂ ನೀಡಿ ಗೌರವಿಸಲಾಗಿದೆ.

ಇದೇ ತಿಂಗಳು ಅಕ್ಟೋಬರ್ 10 ರಂದು ನಾಗರಪುರದಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಸಂಘವು 'ಶಿಕ್ಷಾ ಭೂಷಣ್' ಪ್ರಶಸ್ತಿ ನೀಡಿ ಗೌರವಿಸಿತ್ತು. ಶಾಲಾ ಹಾಗೂ ಖಾಸಗಿ ಸಂಘ ಸಂಸ್ಥೆಗಳಿಂದ ಗೌರವಕ್ಕೆ ಪಾತ್ರರಾಗಿದ್ದರು.

ಭಾರತೀಯ ಮೌಲ್ಯವರ್ಧಿತ ಶಿಕ್ಷಣಕ್ಕೆ ಪ್ರೊ|| ಜಿ.ಎಸ್ ಮುಡಂಬಡಿತ್ತಾಯ ಅವರು ನೀಡಿದ ಕೊಡುಗೆ ಅಪಾರವಾದುದು. ಅವರ ಅಗಲಿಕೆಯಿಂದ ಶಿಕ್ಷಣ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಭಗವಂತನು ಅವರ ಆತ್ಮಕ್ಕೆ ಸದ್ಗತಿ ನೀಡಲಿ ಎಂದು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘ ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಪ್ರಾರ್ಥಿಸುತ್ತದೆ. ●

# ಎಬಿಆರ್‌ಎಸ್‌ಎಂನ ತ್ರೈವಾರ್ಷಿಕ 6ನೇ ಅಧಿವೇಶನದ ಚಿತ್ರಗಳು

























# ವಿಜಯಪುರ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಅರುಣ್ ಶಹಾಪುರ



ಜಿಲ್ಲಾ ಪಂಚಾಯತ್ ತನ್ನ ವ್ಯಾಪ್ತಿಯ ಶಿಕ್ಷಕರ ಕರ್ತವ್ಯದ ಕುರಿತು ಮಾತನಾಡುತ್ತಿದ್ದು, ತಾನು ಮಾಡಬೇಕಿರುವ ಕರ್ತವ್ಯವನ್ನೇ ಮರೆತು ಶಿಕ್ಷಕರಿಗೆ ಅನಗತ್ಯವಾಗಿ ಕಿರುಕುಳ ನೀಡಲಾಗುತ್ತಿದೆ, ಜಿಲ್ಲಾ ಪಂಚಾಯತ್ ಆಡಳಿತ ಕಾರ್ಯವೈಖರಿ ನಿಜಕ್ಕೂ ನೋವು ತರಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ವಿಧಾನ ಪರಿಷತ್ ಸದಸ್ಯ ಅರುಣ ಶಹಾಪುರ, ಇಲ್ಲಿನ ದುರವಸ್ಥೆ ಕುರಿತು ವಿಧಾನ ಮಂಡಳದ ಅಧಿವೇಶನದಲ್ಲಿ ಚರ್ಚಿಸುವುದಾಗಿ ಹೇಳಿ ಗುರುವಾರ ಕರೆದಿದ್ದ ಜಿ. ಪಂ ಸಾಮಾನ್ಯ ಸಭೆ ಬಹಿಷ್ಕರಿಸಿ ಹೊರನಡೆದರು.

14ನೇ ಜಿ.ಪಂ ಸಾಮಾನ್ಯ ಸಭೆಯಲ್ಲಿ ಜಿ.ಪಂ ಆಡಳಿತ ವ್ಯವಸ್ಥೆ, ಶಿಕ್ಷಣ ಇಲಾಖೆಯ ವ್ಯವಸ್ಥೆ ಹಾಗೂ ಸಿಇಒ ವಿರುದ್ಧ ಹರಿಹಾಯ್ದರು. ಅಪರೂಪಕ್ಕೆ ಎಂಬಂತೆ ಜಿ.ಪಂ ಸಭೆಗೆ ಆಗಮಿಸಿದ್ದ ಮೇಲ್ಮನೆ ಸದಸ್ಯ ಅರುಣ ಶಹಾಪೂರ ಮೌನಕ್ಕೆ ಶರಣಾಗಿದ್ದರು. ಸಭೆಯಲ್ಲಿ ಸುಮಾರು 2 ಗಂಟೆಯಾದರೂ ಯಾವುದೇ ಚರ್ಚೆಗಳು ನಡೆಯದಿರುವುದನ್ನು ಗಮನಿಸಿ ಶಿಕ್ಷಕರ ಪ್ರತಿನಿಧಿಯಾಗಿ ಶಿಕ್ಷಕರ ಸಮಸ್ಯೆ ಕುರಿತು ಚರ್ಚಿಸಲು ಜಿ.ಪಂ ಸಭೆಯಲ್ಲಿ ಅವಕಾಶ ಕೊಡಿ ಎಂದು ವಿನಂತಿಸಿದರು. ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿಯೊಬ್ಬರು ವೈದ್ಯಕೀಯ ವೆಚ್ಚದ ಮರುಪಾತಿಗೆ ಸಲ್ಲಿಸಿದ ಪ್ರಸ್ತಾವನೆಯನ್ನು ಅನಗತ್ಯವಾಗಿ ತಿರಸ್ಕರಿಸಲಾಗಿದೆ. ಡಿಡಿಪಿಐ ಹಾಗೂ ಸಿಇಒ ನಿರ್ಧಾರ ಕೈಗೊಳ್ಳಲು ಪರಸ್ಪರರತ್ತ ಅರ್ಜಿ ಓಡಾಡಿಸುತ್ತಿದ್ದಾರೆ. ಮೂರು ತಿಂಗಳಾದರೂ 15 ಶಿಕ್ಷಕರಿಗೆ ಸಂಬಳ ವಿಷಯದಲ್ಲಿ ನೆಪಗಳನ್ನು ಮುಂದಿಟ್ಟುಕೊಂಡು ಕಿರುಕುಳ ನೀಡಲಾಗುತ್ತಿದೆ. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಶಿಕ್ಷಕರ ಸಂಬಳ ಪಾವತಿಸಬೇಕು ಎಂಬ ಸರ್ಕಾರದ ನಿಯಮ ಪಾಲಿಸುವಲ್ಲಿ ನಿರ್ಲಕ್ಷ್ಯ ತೋರುವ ಜಿ.ಪಂ ನಡೆಯಿಂದ ಶಿಕ್ಷಕರು ಕುಟುಂಬ ನಿರ್ವಹಣೆಗೆ ಪರದಾಡುತ್ತಾ, ಆತ್ಮಹತ್ಯೆ ಮಾಡಿಕೊಳ್ಳುವ ದುಃಸ್ಥಿತಿ ಬಂದಿದೆ. ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕೆ ಕಳೆದ ಒಂದು ವರ್ಷದಿಂದ ಸಲ್ಲಿಕೆಯಾದ ಹಲವು ಕಡತಗಳು ಪರಿಹಾರ ಕಾಣದೇ ಕೊಳೆಯುತ್ತಿದೆ.

ನಾನೇ ಖುದ್ದು ನಿಮ್ಮ ಕಛೇರಿಗೆ ಆಗಮಿಸಿ ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕೆ ಮಾಡಿಕೊಂಡ ಮನವಿಗೂ ಸ್ಪಂದನೆ ದೊರೆತಿಲ್ಲ. ವ್ಯಕ್ತಿಗತ ಬೇಸರಕ್ಕಿಂತ ಇಡೀ ಜಿ.ಪಂ. ಹಾಗೂ ಆಡಳಿತ ವ್ಯವಸ್ಥೆ ವಿರುದ್ಧವೇ ಬೇಸರ ಮೂಡಿದೆ. ನಿಮ್ಮ ದುರವಸ್ಥೆ ಕಂಡು ಖೇದವಾಗುತ್ತಿದೆ. ಈ ನಿರ್ಲಕ್ಷ್ಯದ ದುರವಸ್ಥೆ ಬಗ್ಗೆ ನಾನು ವಿಧಾನ ಮಂಡಳ ಸಭೆಯಲ್ಲೇ ಚರ್ಚೆ ನಡೆಸುತ್ತೇನೆ ಎಂದು ಸಿಇಒ ವಿರುದ್ಧ ಅಕ್ರೋಶ ವ್ಯಕ್ತಪಡಿಸಿದ ಅರುಣ ಶಹಾಪುರ ಸಭಾತ್ಯಾಗ ಮಾಡಿದರು.

Registered No. RNI 45459/85
RNP/KA/BGS-125/2015-2017
Posted at Bangalore PSO
Bangalore -560 026

OCTOBER 2015
Date of Posting
20th or 21st of every month

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com